# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA









ಸಂಪುಟ:01 Volume:01 • ಸಂಚಿಕೆ:187 Issue:187 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 19.12.2023 19.12.2023 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2










## ಮೈಕ್ರೋ ನ್ಯೂಸ್

### ಕರಾಮಕಾ ಸಂಘ ಹೋರಾಟಕ್ಕೆ ಕೊಟ್ಟೂರು ಘಟಕದಿಂದ ಬೆಂಬಲ

**ಹಂಪಿ ಟೈಮ್ಸ್ ಕೊಟ್ಟೂರು**

ಡಿ.20 ರಿಂದ 22 ರವರೆಗೆ ವಿವಿಧ ಬೇಡಿಕೆ ಹಕ್ಕೊತ್ತಾಯಿಸಿ ಕರ್ನಾಟಕ ರಾಜ್ಯ ಮಸಣ ಕಾರ್ಮಿಕ ಸಂಘ ರಾಜ್ಯ ಸಮಿತಿ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಹಮ್ಮಿಕೊಂಡ ಧರಣಿಗೆ ಬೆಂಬಲ ವ್ಯಕ್ತಪಡಿಸಲು ಕರಾಮಕಾ ಸಂಘ



ಕೊಟ್ಟೂರು ತಾಲೂಕು ಘಟಕ ಪಾಲ್ಗೊಂಡು ಬೆಂಬಲ ವ್ಯಕ್ತಪಡಿಸಲಿದೆ ಎಂದು ಸಂಘದ ಕಾರ್ಯದರ್ಶಿ ಎಚ್.ರುದ್ರಪ್ಪ ಹೇಳಿದರು.

ಸೋಮವಾರ ಪತ್ರಿಕೆಯೊಂದಿಗೆ ಮಾತನಾಡಿದ ಅವರು ಮಸಣ ಕಾರ್ಮಿಕ ಜೀವನ ಚಿಂತಾಜನಕ, ಸ್ಥಿತಿಯಲ್ಲಿದ್ದು ಜೀವನ ಕ್ಷೇಮಾಭಿವೃದ್ಧಿಗಾಗಿ ಪ್ರತಿ ಮಸಣಕ್ಕೊಬ್ಬರಂತೆ ಮಸಣ ಕಾರ್ಮಿಕರನ್ನು ಸ್ಥಳೀಯ ಸಂಸ್ಥೆಗೆ ನೇಮಕ ಮಾಡಿಕೊಳ್ಳಬೇಕು,ಹಾಗೆ ಮಸಣ ಕಾರ್ಮಿಕರಿಗೆ ಮಾಸಿಕ ಪಿಂಚಣಿ ಜಾರಿಮಾಡಬೇಕು. ಇದೇ ರೀತಿ ಹಲವು ಬೇಡಿಕೆಗಳ ಹಕ್ಕೊತ್ತಾಯಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಕರ್ನಾಟಕ ರಾಜ್ಯ ಮಸಣ ಕಾರ್ಮಿಕ ಸಂಘ ರಾಜ್ಯ ಸಮಿತಿ ಹಮ್ಮಿಕೊಂಡ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಲು ತಾಲೂಕಿನ 14 ಗ್ರಾಪಂ ಗೆ ಸೇರಿದ 61 ಹಳ್ಳಿಯ 250 ಜನರು ಪಾಲ್ಗೊಳ್ಳಲಿದ್ದೇವೆ ಎಂದು ಮಾಹಿತಿ ನೀಡಿದರು. ತಾಲೂಕಿನ ಆಸಕ್ತರು ಹೋರಾಟದಲ್ಲಿ ಪಾಲ್ಗೊಂಡು ಹೋರಾಟವನ್ನು ಯಶಸ್ವಿ ಗೊಳಿಸಬೇಕೆಂದು ಕೋರಿದರು.

# ವೈಜ್ಞಾನಿಕ ಜಾತಿಗಣತಿಗೆ ಆಗ್ರಹ

**ಅ.ಭಾ.ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಬಿ.ಶ್ರೀನಿವಾಸ ರೆಡ್ಡಿ ಒತ್ತಾಯ | ದಾವಣಗೆರೆಯಲ್ಲಿ ಡಿ.23–24ರಂದು ಮಹಾಧಿವೇಶನ**

**ಹಂಪಿ ಟೈಮ್ಸ್ ಹೊಸಪೇಟೆ**

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯು 24ನೇ ಮಹಾ ಅಧಿವೇಶವನ್ನು ಡಿ.23 ಮತ್ತು 24 ರಂದು ದಾವಣಗೆರೆಯಲ್ಲಿ ಹಮ್ಮಿಕೊಂಡಿದೆ. ರಾಜ್ಯದ ವಿವಿಧ ಜಿಲ್ಲೆ ಹಾಗೂ ನೆರೆ ರಾಜ್ಯಗಳಿಂದ 5 ಲಕ್ಷ ಜನರು ಸೇರುವ ನಿರೀಕ್ಷೆ ಇದೆ. ಅಧಿವೇಶನದಲ್ಲಿ ಜಾತಿ ಜನಗಣತಿ ಸೇರಿದಂತೆ ಮಹತ್ತರ ತೀರ್ಮಾನ ಕೈಗೊಳ್ಳಲಾಗುತ್ತಿದ್ದು ಸಮಸ್ತ ವೀರಶೈವ ಲಿಂಗಾಯತ ಬಂಧುಗಳು ಅಧಿವೇಶನಕ್ಕೆ ಹಾಜರಾಗಬೇಕೆಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ರಾಜ್ಯ ಕಾರ್ಯದರ್ಶಿ ಕೆ.ಬಿ.ಶ್ರೀನಿವಾಸ ರೆಡ್ಡಿ ತಿಳಿಸಿದರು.



ನಗರದ ಪತ್ರಿಕಾ ಭವನದಲ್ಲಿ ಮಾತನಾಡಿದ ಅವರು, ಈ ಹಿಂದೆ ನಡೆಸಿದ ಜಾತಿ ಜನಗಣತಿಯಲ್ಲಿ ಅಸಂಖ್ಯಾತ ವೀರಶೈವ ಲಿಂಗಾಯತರ ಮನೆಗಳಿಗೆ ತೆರಳದೆ ಜಾತಿಗಣತಿಯಲ್ಲಿ ತಮಗಿಷ್ಟಬಂದಂತೆ ನಮೂದಿಸಿಕೊಂಡಿದ್ದಾರೆ. ವೀರಶೈವ ಲಿಂಗಾಯತ ಧರ್ಮ ಎಂದು ಹೇಳಿದರೂ ನೋಂದಾಯಿಸಿಕೊಳ್ಳದೆ ಹಿಂದೂ ಎಂದು ನಮೂದಿಸಿಕೊಂಡಿದ್ದಾರೆ. ಜಾತಿಗಣತಿ ಮಾಹಿತಿ ಸಂಗ್ರಹ ಅರ್ಜಿ ಫಾರಂನಲ್ಲೆ ವೀರಶೈವ ಲಿಂಗಾಯತ ಎಂದು ನಮೂದಿಸಲು ಕಾಲಂ ಗೆ ಅವಕಾಶ ನೀಡಲಾಗಿಲ್ಲ. ಜಾತಿಗಣತಿ ವರದಿ ಬಹಿರಂಗಗೊಳ್ಳುವ ಮುನ್ನವೆ ವೀರಶೈವ ಲಿಂಗಾಯತಗೆ ಕಡಿಮೆ ಸಂಖ್ಯೆ ಹೇಗೆ ಗೊತ್ತಾಗುತ್ತದೆ ಎಂಬುದು ಅನೇಕರ ಪ್ರಶ್ನೆ ಸಹಜ. ಆದರೆ ವೀರಶೈವ ಲಿಂಗಾಯತ ಸಮುದಾಯದ ರಾಜ್ಯದ ಅನೇಕ ಕುಟುಂಬದ ಯಜಮಾನರೇ ನಮ್ಮ ಮನೆಗೆ ಜಾತಿಗಣತೆಗೆ ಬಂದಿಲ್ಲ. ಅದು ಹೇಗೆ ಜಾತಿಗಣತೆ ಮಾಡಿದ್ದಾರೆ ಎಂದು ಪ್ರಶ್ನಿಸುತ್ತಿದ್ದಾರೆ. ಈ ಆಧಾರದ ಮೇಲೆಯೆ ಕಾಂತರಾಜು ನೇತೃತ್ವದಲ್ಲಿ ತಯಾರದ ಹಿಂದುಳಿದ ವರ್ಗಗಳ ಆಯೋಗದ ಜಾತಿ ಗಣತಿ ವರದಿ ಅವೈಜ್ಞಾನಿಕವಾಗಿದ್ದು ಸ್ವೀಕರಿಸಬಾರದು ಎಂದು ಬೆಳಗಾವಿ ಅಧಿವೇಶನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಡಾ.ಶ್ಯಾಮನೂರ ಶಿವಶಂಕ್ರಪ್ಪ ಮತ್ತು ಸಚಿವ ಈಶ್ವರ ಖಂಡ್ರೆ ಅನೇಕ ಶಾಸಕರ ಸಹಮತದೊಂದಿಗೆ ಸಿಎಂಗೆ ಮನವಿ ನೀಡಿ ಒತ್ತಾಯಿಸಿದ್ದಾರೆ. ದಾವಣಗೆರೆಯಲ್ಲಿ ನಡೆಯುವ ಅಧಿವೇಶನದಲ್ಲಿ ಇನ್ನಷ್ಟು ಮಹತ್ವದ ತೀರ್ಮಾನ ಕೈಗೊಂಡು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಎಲ್ಲರೂ ಪಾಲ್ಗೊಳ್ಳಬೇಕು ಎಂದರು.

ಮಹಾಸಭಾದ ಜಿಲ್ಲಾಧ್ಯಕ್ಷ ಚಾನಳ ಶೇಖರ ಮಾತನಾಡಿ, ಧರ್ಮದ ಕಾಲಂ ಇಲ್ಲದೆ ಜಾತಿಗಣತಿ ನಡೆಸಿರುವುದುರಿಂದ ವೀರಶೈವ ಲಿಂಗಾಯತರ ಸಂಖ್ಯೆ ಇಳಿದಿರುವ ಸಾಧ್ಯತೆಗಳಿವೆ. ಹಾಗಾಗಿ ಅವೈಜ್ಞಾನಿಕ ಜಾತಿಗಣತಿಯನ್ನು ಕೈಬಿಟ್ಟು ಹೊಸದಾಗಿ ಜಾತಿಗಣತಿ ಮಾಡಬೇಕು. ರಾಜ್ಯದಲ್ಲಿನ ವೀರಶೈವ ಲಿಂಗಾಯತರು ಈ ಜಾತಿಗಣತಿಯನ್ನು ಒಪ್ಪುವುದಿಲ್ಲ. ವೀರಶೈವ ಲಿಂಗಾಯತರನ್ನು ಹಿಂದೂ ಲಿಂಗಾಯತ, ವೀರಶೈವ ಲಿಂಗಾಯತ ಎಂದು ಜಾತಿ ಕಾಲಂನಲ್ಲಿ ನಮೂದಿಸಿಕೊಳ್ಳಲಾಗಿದೆ. ದಾವಣಗೇರಿಯಲ್ಲಿ ನಡೆಯುವ ಅಧಿವೇಶನಕ್ಕೆ ತೆರಳಲು ಅಖಂಡ ಜಿಲ್ಲೆಯಿಂದ 80ಕ್ಕೂ ಅಧಿಕ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಸಮಾಜ ಬಾಂಧವರು ಸಂಘಟಿತರಾಗಿ ಅಧಿವೇಶನದಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದರು.

ವಾಣಿಜ್ಯ ಘಟಕದ ಅಧ್ಯಕ್ಷ ಅಶ್ವಿನ್ ಕೋತಂಬ್ರಿ, ಮಾತನಾಡಿ, ಎರಡು ದಿನ ನಡೆಯುವ ಅಧಿವೇಶನದಲ್ಲಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಕೈಗಾರಿಕಾ, ಕೃಷಿ, ಯುವ, ಮಹಿಳಾ ಅಧಿವೇಶನಗಳು ಮತ್ತು ಸಮಾರೋಪ ಸಮಾರಂಭ ಹಾಗೂ ಸಾಂಸ್ಕೃತಿಕ ಪರಂಪರೆ ಗೋಷ್ಠಿಗಳಿರುತ್ತವೆ. ಕೈಗಾರಿಕಾ ಮತ್ತು ವಾಣಿಜ್ಯ ಹಾಗೂ ಕೃಷಿ ಸಂಬಂಧಿತ ಪ್ರದರ್ಶನವೂ ಏರ್ಪಡಿಸಲಾಗಿದೆ. ವೀರಶೈವ ಲಿಂಗಾಯತ ಬಂಧುಗಳು ಆಗಮಿಸಬೇಕು ಎಂದರು. ಮಹಾಸಭಾದ ಜಿಲ್ಲಾ ಕಾರ್ಯದರ್ಶಿಗಳಾದ ಕೆ.ಚಂದ್ರಶೇಖರ, ಶಿವಕುಮಾರ್ ಕೋಟೆ ಕಲ್ಮಠ, ತಾಲೂಕಧ್ಯಕ್ಷ ಎಲ್.ಬಸವರಾಜಪ್ಪ, ರಾಜ್ಯ ಯುವ ಘಟಕ ಕಾರ್ಯ ದರ್ಶಿ ಅಂಗಡಿ ಶಂಕರ, ಸಮಾಜದ ಮುಖಂಡರಾದ ವೀರೇಶ, ಕೋರಿಶೆಟ್ಟಿ ಲಿಂಗಪ್ಪ, ಕಾಶಿನಾಥಯ್ಯ, ಪರಮೇಶ ಇತರರು ಇದ್ದರು.

# ಬಣ್ಣದಲ್ಲಿ ಕಾಣು ಕಲಾವಿದನ ಭಾವನೆ

**ಕನ್ನಡ ವಿವಿ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಹೇಳಿಕೆ | ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ**




**ಹಂಪಿ ಟೈಮ್ಸ್ ಹೊಸಪೇಟೆ**

ಕವಿ ತನ್ನ ಭಾವನೆಗಳನ್ನು ಅಕ್ಷರಗಳ ಮೂಲಕ ವ್ಯಕ್ತಪಡಿಸಿದರೆ, ಚಿತ್ರಗಾರ ಬಣ್ಣಗಳ ಮೂಲಕ ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಾನೆ ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಡಿ.ವಿ. ಪರಮಶಿವಮೂರ್ತಿ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದ ಕಲಾ ಗ್ಯಾಲರಿಯಲ್ಲಿ ಹಮ್ಮಿಕೊಂಡಿದ್ದ ಕಲಾವಿದ ರಾಮೇಶ್ ದಿಕ್ಷೀತ್ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡುತ್ತಾ ಮನುಷ್ಯನ ಹುಟ್ಟಿನಿಂದ ಕಲೆ ಪ್ರಾರಂಭವಾಯಿತು. ಕಲೆಯ ಅಭಿರುಚಿ ಹೊಂದಿರುವ ವ್ಯಕ್ತಿಯ ಮನಸ್ಸು ಸಂಪದ್ಭರಿತವಾಗಿರುತ್ತದೆ. ಕಲೆ ಎಂಬುದು ಎಲ್ಲರಿಗೂ ಬರುವುದಿಲ್ಲ. ಬದುಕಿನ ಜೊತೆ-ಗೆ ಕಲೆ ಬೆರೆತು ವಿಕಾಸ ಹೊಂದುತ್ತದೆ. ಕಲಾವಿದ ತನ್ನ ಮನಸ್ಸಿನ ಭಾವನೆಯನ್ನು ವ್ಯಕ್ತಪಡಿಸಲು ಆಯ್ಕೆ ಮಾಡಿಕೊಂಡಿರುವ ವೇದಿಕೆ ಕಲಾ ಮಾಧ್ಯಮವಾಗಿದೆ. ಇನ್ನೂ ಹಂಪಿಯ ಸುತ್ತಮುತ್ತಲೂ ಆದಿಮಾನವರ ಚಿತ್ರಕಲೆಗಳನ್ನು ನೋಡಲು ಸಾಧ್ಯ. ಕಲಾವಿದ ಚಿತ್ರಕಲೆಯಲ್ಲಿ ಹೊಸ-ಹೊಸ ವಿನ್ಯಾಸ, ಆವಿಷ್ಕಾರವನ್ನು ಆಯ್ಕೆ ಮಾಡಿಕೊಂಡು ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾನೆ. ಸಾಮಾನ್ಯ ಜನರಿಗೆ ಒಂದು ಚಿತ್ರವನ್ನು ಅರ್ಥಮಾಡಿಕೊಳ್ಳಬೇಕಾದರೆ ಕಲಾವಿದನ ಮನಸ್ಥಿತಿಯಲ್ಲಿ ನಿಂತು ನೋಡಿದಾಗ ಮಾತ್ರ ಆ ಚಿತ್ರ ನಮಗೆ ಅರ್ಥವಾಗುತ್ತದೆ. ಕಲಾವಿದನಿಗೆ ಕ್ರಿಯಾಶೀಲ ಚಿತ್ರಗಳ ಕಡೆ ಗಮನ ನೀಡಿದರೆ ಮನಸ್ಸಿಗೆ ತೃಪ್ತಿ ಸಿಗುತ್ತದೆ. ಕಲಾವಿದ ಕೀರ್ತಿ ಹಿಂದೆ ಬೀಳದೆ ಕೆಲಸವನ್ನು ಮಾಡುತ್ತಾ ಹೋದರೆ ಕೀರ್ತಿ ತಾನಾಗೆ ನಿಮ್ಮ ಹಿಂದೆ ಬರುತ್ತದೆ. ಕಲ್ಯಾಣ ಕರ್ನಾಟಕ ಭಾಗದ ಕಲಾವಿದರು ಕನ್ನಡ ವಿಶ್ವವಿದ್ಯಾಲಯ ದೃಶ್ಯಕಲಾ ವಿಭಾಗದ ಸಹಕಾರ ಪಡೆದರೆ ಇನ್ನು ಉತ್ತಮ ಸಾಧನೆ ಮಾಡಲು ಅವಕಾಶ ಸಿಗುತ್ತದೆ ಎಂದರು.

ದೆಹಲಿ ಹಿರಿಯ ಕಲಾವಿದರಾದ ಸುಧೀರ್ ವ್ಹಿ. ಘಡ್ನೀಸ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡುತ್ತಾ ಕಲಾವಿದರಿಗೆ ತಂದೆ-ತಾಯಿಯರ ಪ್ರೋತ್ಸಾಹ ತುಂಬಾ ಮುಖ್ಯವಾಗುತ್ತದೆ. ದೆಹಲಿಯಲ್ಲಿ ಕರ್ನಾಟಕ ಕಲಾ ಪ್ರದರ್ಶನ ಕೇಂದ್ರದಲ್ಲಿ ಕರ್ನಾಟಕದ ಕಲಾವಿದರಿಗೆ ಕಲಾಪ್ರದರ್ಶನಕ್ಕೆ ಉಚಿತ ವ್ಯವಸ್ಥೆ ಇರುತ್ತದೆ. ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಜೆ.ಎಸ್.ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ತೋರಣಗಲ್‌ನ ಹಿರಿಯ ಉಪಾಧ್ಯಕ್ಷರಾದ ಟಿ.ಎಸ್.ಗೌಡ, ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ, ಲಲಿತ ಕಲಾ ನಿಕಾಯದ ಡೀನರಾದ ಡಾ. ಶಿವಾನಂದ ವಿರಕ್ತಮಠ, ಸಂಗಿತ ವಿಭಾಗದ ಮುಖ್ಯಸ್ಥರಾದ ಡಾ. ವೀರೇಶ್ ಬಡಿಗೇರ, ವಿವಿಧ ನಿಕಾಯದ ಡೀನರು, ಪ್ರಾಧ್ಯಾಪಕರು, ಕಲಾವಿದ ರಾಮೇಶ್ ದಿಕ್ಷೀತ, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ದೃಶ್ಯಕಲಾ ವಿಭಾಗದ ಮುಖ್ಯಸ್ಥರಾದ ಡಾ. ಮೋಹನ್‌ರಾವ್ ಬಿ. ಪಂಚಾಳ ಗಣ್ಯರನ್ನು ಸ್ವಾಗತಿಸಿ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ಮಾತನಾಡಿದರು. ಚರಿತ್ರೆ ವಿಭಾಗದ ಸಂಶೋಧನಾರ್ಥಿಯಾದ ಮಣಿಕಂಠ ಹಂಗಳ ಕಾರ್ಯಕ್ರಮವನ್ನು ನಿರೂಪಿಸಿದರು. ಸಂಗೀತ ವಿಭಾಗದ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ದೃಶ್ಯಕಲಾ ವಿಭಾದ ಅಧ್ಯಾಪಕರಾದ ಡಾ. ಎಚ್.ಎನ್. ಕೃಷ್ಣೇಗೌಡ ವಂದಿಸಿದರು.

# 2 ಟನ್ ಪುಷ್ಪಗಳಿಂದ ಅಲಂಕಾರ

**ಶ್ರೀಗುರುಕೊಟ್ಟೂರೇಶ್ವರಸ್ವಾಮಿದೇವಸ್ಥಾನಗರ್ಭಗುಡಿ ಪ್ರಾಂಗಣ ಹಾಗೂ ದೇವಸ್ಥಾನ ಪುಷ್ಪಗಳಿಂದ ಶೃಂಗಾರ**



**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಆರಾಧ್ಯ ದೇವರು ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದ ಗರ್ಭಗುಡಿ, ಪ್ರಾಂಗಣ ಹಾಗೂ ಹೊರಭಾಗ ಸೇರಿದಂತೆ ದೇವಸ್ಥಾನವೆಲ್ಲ ವಿವಿಧ 9 ಬಗೆಯ 2 ಟನ್ ಪುಷ್ಪಗಳಿಂದ ಶೃಂಗರಿಸಿಕೊಂಡು ಸೋಮವಾರ ಭಕ್ತರನ್ನು ಆಕರ್ಷಿಸಿತು.

ಪಟ್ಟಣದ ಬಣಕಾರ ಶಿವಮ್ಮ ಅವರ ಪುತ್ರರು ಮೂಗಣ್ಣ ಮತ್ತು ಕೊಟ್ರೇಶ್ ಸಹೋದರರು ಸತತ 8 ವರ್ಷಗಳಿಂದ ಶ್ರೀ ಸ್ವಾಮಿಯ ಕಾರ್ತಿಕೋತ್ಸವ ದಿನದ ಎರಡನೇ ಸೋಮವಾರ ಶ್ರೀಸ್ವಾಮಿಗೆ ಹಾಗೂ ದೇವಸ್ಥಾನಕ್ಕೆ ಸಂಪೂರ್ಣ ಪುಷ್ಪಾಲಂಕಾರ ಮಾಡಿ ಭಕ್ತಿ ಸಮರ್ಪಿಸುತ್ತಾ ಬಂದಿದ್ದಾರೆ. 1.30 ಲಕ್ಷ ರೂ.ವೆಚ್ಚದಲ್ಲಿ ಸೇವಂತಿಗೆ, ಮಲ್ಲಿಗೆ, ಸುಗಂಧರಾಜ್ ಸೇರಿದಂತೆ 9 ಬಗೆಯ 2 ಟನ್ ಪುಷ್ಪಗಳನ್ನು ಅಲಂಕಾರಕ್ಕೆ ಬಳಸಲಾಗಿದೆ ಎಂದು ಮಾಹಿತಿ ನೀಡಿದರು. ದೇವಸ್ಥಾನದ ಪುಷ್ಪಾಲಂಕಾರ ನೋಡಲು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಭಕ್ತರು ತಂಡೋಪ ತಂಡವಾಗಿ ದೇವಸ್ಥಾನಕ್ಕೆ ಆಗಮಿಸಿ ಶ್ರೀಸ್ವಾಮಿಯ ದರ್ಶನ ಪಡೆಯುವ ಮೂಲಕ ಪುಷ್ಪಾಲಂಕಾರವನ್ನು ವೀಕ್ಷಿಸಿ ಕಣ್ತುಂಬಿಕೊಂಡರು.

> ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಗೆ ಪ್ರತಿ ವರ್ಷ ಕಾರ್ತಿಕೋತ್ಸವದ ಪುಷ್ಪಾಲಂಕಾರ ಮಾಡುತ್ತೇವೆ, ನಮ್ಮ ಮನಶಾಂತಿ ಮತ್ತು ಧಾರ್ಮಿಕ ಪರಂಪರೆ ಹಾಗೂ ರೈತರ ಹೂವಿನ ತೋಟಗಾರಿಕೆಯನ್ನು ಉತ್ತೇಜಿಸಲು ಪುಷ್ಪ ಸೇವೆಯನ್ನು ಮುಂದುವರೆಸಿಕೊಂಡು ಬರಲಾಗುತ್ತಿದೆ.
>
> – **ಬಣಕಾರ ಕೊಟ್ರೇಶ್ ಮತ್ತು ಮೂಗಪ್ಪ** ಸಹೋದರರು, ಕೊಟ್ಟೂರು.




## ಶಿಕ್ಷಣಾರೋಗ್ಯ ಕ್ಷೇತ್ರಕ್ಕೆ ಕ್ರಿಶ್ಚಿಯನ್ ಸಮುದಾಯದ ಕೊಡುಗೆ ಅತ್ಯುತ್ತಮ: ಮುಖ್ಯಮಂತ್ರಿ ಸಿದ್ದರಾಮಯ್ಯ



**ಹಂಪಿ ಟೈಮ್ಸ್ ಬೆಂಗಳೂರು:**
ಸಾಮಾಜಿಕ ಅಸಮಾನತೆಯಿರುವ ಕಾಲಮಾನದಲ್ಲಿ ಕ್ರಿಶ್ಚಿಯನ್ ಸಮುದಾಯ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿನ ಸೇವೆ ಶ್ಲಾಘನೀಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.
ಅವರು ನಗರದ ಬ್ಯಾಪ್ಟಿಸ್ಟ್ ಆಸ್ಪತ್ರೆಯಲ್ಲಿ ಲೀನಿಯರ್ ಆಕ್ಸರಲೇಟರ್ ರೆಡಿಯಷನ್ ಥೆರಪಿ ಸೇವೆ ಕಾರ್ಯಕ್ರಮವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದರು. ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಕ್ರಿಶ್ಚಿಯನ್ ಸಮುದಾಯ ಅತ್ಯುತ್ತಮ ಕೆಲಸವನ್ನು ಮಾಡಿದೆ. ಉಡುಪಿ ಹಾಗೂ ಮಂಗಳೂರಿನಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಈ ಸಮುದಾಯ ಒಳ್ಳೆಯ ಬುನಾದಿಯನ್ನು ಹಾಕಿದೆ. ಭಾರತೀಯ ಸಮಾಜದಲ್ಲಿ ಬಹುಸಂಖ್ಯಾತ ಜನ ಅಕ್ಷರಸಂಸ್ಕೃತಿಯಿಂದ ವಂಚಿತರಾಗಿದ್ದರು.

**ಆಸ್ಪತ್ರೆಯಲ್ಲಿ ಆಧುನಿಕ ಚಿಕಿತ್ಸಾ ಸೌಲಭ್ಯ :**
ಬ್ಯಾಪ್ಟಿಸ್ಟ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಕಾಯಿಲೆ ಗುಣಪಡಿಸುವ ಆಧುನಿಕ ಚಿಕಿತ್ಸಾ ವಿಧಾನವಾದ ಲೀನಿಯರ್ ಆಕ್ಸರಲೇಟರ್ ರೆಡಿಯಷನ್ ಥೆರಪಿ ಸೇವೆಯನ್ನು ಇಂದು ಉದ್ಘಾಟಿಸಲಾಗಿದೆ. ಪ್ರಥಮ ಹಂತದಲ್ಲಿ ಕ್ಯಾನ್ಸರ್ ರೋಗವನ್ನು ಪತ್ತೆ ಹಚ್ಚಿದರೆ, ರೋಗವನ್ನು ಗುಣಪಡಿಸಬಹುದು. ಕಡೆಯ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾದಾಗ, ಕಾಯಿಲೆ ಉಲ್ಬಣಗೊಳ್ಳದಿರಲು ಈ ಅತ್ಯಾಧುನಿಕ ಚಿಕಿತ್ಸೆ ಸಹಕಾರಿಯಾಗಿದೆ. ಈ ಆಸ್ಪತ್ರೆಗೆ ಹಳ್ಳಿಗಾಡಿನ ಜನರು ಹೆಚ್ಚು ಬರುವುದರಿಂದ ಇಲ್ಲಿನ ವೈದ್ಯರು ಕನ್ನಡದಲ್ಲಿ ಮಾತನಾಡುವುದರಿಂದ ರೋಗಿಗಳಿಗೆ ಹೆಚ್ಚು ಅನುಕೂಲವಾಗುತ್ತದೆ ಎಂದರು.

**ಕೈಗೆಟಕುವ ದರದಲ್ಲಿ ಆರೋಗ್ಯ ಸೇವೆ :**
ಶ್ರೀಮಂತರು ಉತ್ತಮ ಹಾಗೂ ದುಬಾರಿ ಖಾಸಗಿ ಆಸ್ಪತ್ರೆಗೆ ಹೋಗುತ್ತಾರೆ. ಆದರೆ ದಿನನಿತ್ಯಜೀವನದಕ್ಕಾಗಿ ಹೋರಾಡುವ ಬಡಜನರಿಗೆ ಕಡಿಮೆ ದರದಲ್ಲಿ ಆರೋಗ್ಯ ಸೇವೆ ನೀಡುವ ಬ್ಯಾಪ್ಟಿಸ್ಟ್ ಆಸ್ಪತ್ರೆ ಜನಸೇವೆಯಲ್ಲಿ ನಂಬಿಕೆ ಇರಿಸಿದೆ.ಬ್ಯಾಪ್ಟಿಸ್ಟ್ ಆಸ್ಪತ್ರೆಯು ಬಡವರಿಗೆ ಕೈಗೆಟಕುವ ದರದಲ್ಲಿ ಚಿಕಿತ್ಸೆ ನೀಡುತ್ತಾ ಬಂದಿದೆ. ಸರ್ಕಾರಿ ಆಸ್ಪತ್ರೆಯಂತೆ ಬ್ಯಾಪ್ಟಿಸ್ಟ್ ಆಸ್ಪತ್ರೆ ಬಡರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡುತ್ತಿದ್ದು, ಸರ್ಕಾರ ಈ ಆಸ್ಪತ್ರೆಗೆ ಎಲ್ಲ ರೀತಿಯ ಸಹಕಾರವನ್ನು ನೀಡಲಿದೆ ಎಂದರು.



# ಬಿಜೆಪಿಯ ಸತ್ಯಾಶೋಧನಾ ಸಮಿತಿಯ ರಾಜಕೀಯ...

**"ಯತ್ರ ನಾರಸ್ತು ಪೂಜೆಂತೆ, ತತ್ರ ರಮಂತೆ ದೇವತಃ",**

ಎಲ್ಲಿ ನಾರಿಯರನ್ನು ಪೂಜಿಸಲಾಗುವುದೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂಬ ಸಂಸ್ಕೃತ ಶ್ಲೋಕವನ್ನು ಕಂಠಪಾಠ ಮಾಡಿಕೊಂಡು, ಹೆಣ್ಣನ್ನು ಭಾರತಮಾತೆ ಪೂಜ್ಯಳು ಎಂದು ಹಾದಿ ಬೀದಿಯಲ್ಲಿ ಭಾಷಣ ಮಾಡುತ್ತಾ "ಬೇಟಿ ಪಡವ್, ಬೇಟಿ ಬಚಾವ್" ಎಂದು ಘೋಷಣೆಯನ್ನು ಕೂಗುತ್ತಾ, ಅಧಿಕಾರಕ್ಕೆ ಬಂದ ಮಾನ್ಯ ಮೋದಿಯವರ ಬಿಜೆಪಿ ಸರ್ಕಾರದಲ್ಲಿ ಕಳೆದ ಹತ್ತು ವರ್ಷಗಳಿಂದ ತಮ್ಮ ಆಡಳಿತದಲ್ಲಿ ಮಹಿಳೆಯರು ಅದೆಷ್ಟು ಸುರಕ್ಷಿತರು? ಎಂದು ಅವರೇ ಅವಲೋಕನ ಮಾಡಿಕೊಳ್ಳಬೇಕು. ಏಕೆಂದರೆ ಇಡೀ ಮನುಕುಲವೇ ನಾಚಿಕೆಪಡುವಂತಹ ಹೀನ ಕೃತ್ಯಗಳು ಅವರ ಆಡಳಿತದ ಕಾಲದಲ್ಲಿ ಹೆಚ್ಚು ನಡೆದಿರುತ್ತವೆ... ಅದಕ್ಕೆ ಉದಾಹರಣೆಯಾಗಿ



ಸಾವಿರಾರು ಘಟನೆಗಳಿದ್ದರೂ, ಇಲ್ಲಿ ಎರಡು ಘಟನೆಗಳನ್ನು ಅವಲೋಕನ ಮಾಡೋಣ.

2012ರಲ್ಲಿ ದೆಹಲಿಯ ನಿರ್ಭಯಳ ಸಾಮೂಹಿಕ ಅತ್ಯಾಚಾರ ವಿಷಯವನ್ನು ಮುಂದಿಟ್ಟುಕೊಂಡು "ಬೇಟಿ ಪಡಾವ್, ಬೇಟಿ ಬಚಾವ್ "ಎಂದು ಇಡೀ ಭಾರತ ದೇಶದ ಹೆಣ್ಣು ಮಕ್ಕಳನ್ನು ದತ್ತು ತೆಗೆದುಕೊಂಡ ಹಾಗೆ ರಂಜಿಸಿ, ತಮ್ಮ ವಾಟ್ಸಾಪ್ ಯುನಿವರ್ಸಿಟಿ ಮೂಲಕ ಮನೆಮನೆಗೆ ಹೊಕ್ಕು, ಇಂದು ಮನೆಯಲ್ಲಿರುವ ಗೃಹಿಣಿಯರೂ ಸುರಕ್ಷಿತವಾಗಿಲ್ಲದ ವಾತಾವರಣದ ಆಡಳಿತವನ್ನು ಬಿಜೆಪಿಯವರು ಮಹಿಳೆಯರಿಗೆ ಬಂಪರ್ ಬಹುಮಾನವಾಗಿ ಕೊಟ್ಟಿದ್ದಾರೆ.

ಬಿಜೆಪಿ ಸರ್ಕಾರ ಮಹಿಳೆಯರ ಅಸ್ಮಿತೆಗೆ ದಕ್ಕೆ ಉಂಟುಮಾಡಿದೆ."ಬೇಟಿ ಪಡವ್, ಬೇಟಿ ಬಚಾವ್" ಎಂಬ ನಯಾ ಪೈಸೆ ಖರ್ಚಿಲ್ಲದ ಈ ಘೋಷಣೆಗೆ, ನಮ್ಮದೇ ಮಕ್ಕಳು ನಾವೇ ವಿದ್ಯಾಭ್ಯಾಸ ಕೊಡುವವರು, ನಾವೇ ಸಾಕಿ ಸಲಹುವ ಪೋಷಕರು. ಇದರಲ್ಲಿ ಸರ್ಕಾರದ ಪಾತ್ರವೇನು? ಈ ಪುಕ್ಕಟ್ಟೆ ಘೋಷಣೆಯನ್ನೇ ಯೋಜನೆಯೆಂದು ನಂಬಿ ಭಾರತದ ಮಹಿಳೆಯರು ಯಾವುದೇ ಆಲೋಚನೆ ಮಾಡದೆ, ಅದರಲ್ಲೂ ಕೆಳ ಮಧ್ಯಮ ವರ್ಗ ಮತ್ತು ಮಧ್ಯಮ ವರ್ಗದ ಮಹಿಳೆಯರು, ಮೋದಿಯವರು ತಮ್ಮನ್ನು ರಕ್ಷಣೆ ಮಾಡಲು ಬಂದ ಸಾಕ್ಷಾತ್ ದೇವರೆಂದು ನಂಬಿ ಅವರಿಗೆ ಮತ ಚಲಾಯಿಸಿದರು. ಆದರೆ ಅವರ ನಂಬಿಕೆಯನ್ನು ಉಳಿಸಿಕೊಂಡರೆ ಮಾನ್ಯ ಮೋದಿಯವರು ಎಂದು ನಮ್ಮ ಮಹಿಳೆಯರು ಯೋಚಿಸಬೇಕು.

ಮಾನ್ಯ ಮೋದಿಯವರು ಅಧಿಕಾರಕ್ಕೆ ಬಂದ ಮೇಲೆ ವಾಸ್ತವದಲ್ಲಿ ಮಹಿಳೆಯರ ಮೇಲಿನ ಹಿಂಸಾಚಾರಗಳು, ಬೆತ್ತಲೆ ಮೆರವಣಿಗೆಗಳು, ಲೈಂಗಿಕ ದೌರ್ಜನ್ಯಗಳು, ಕೊಲೆಗಳು, ಹೆಣ್ಣು ಭ್ರೂಣ ಹತ್ಯೆಗಳು, ನಡೆದಷ್ಟು ಸ್ವಾತಂತ್ರ ಭಾರತದ ಹಿಂದಿನ ಬಿಜೆಪಿಯ ವಾಜಪೇಯಿ ಸರ್ಕಾರ ಸೇರಿದಂತೆ, ಯಾವುದೇ ಸರ್ಕಾರಗಳಲ್ಲಿಯೂ ಬಹುಶಃ ನಡೆದಿರಲಿಕ್ಕಿಲ್ಲ. ಮೇಲಿನ ಎಲ್ಲಾ ಆಘಾತಕಾರಿ ಘಟನೆಗಳನ್ನು ಖಂಡಿಸಿ, ತಮ್ಮ " ಬೇಟಿ ಬಚಾವ್" ಎಂಬ ಮಾತನ್ನು ಉಳಿಸಿಕೊಳ್ಳಲು ವಿಫಲರಾದರು.

2020ರಲ್ಲಿ ಉತ್ತರ ಪ್ರದೇಶದ ಹಥರಾಸ್ ನಲ್ಲಿ ದಲಿತ ಮಹಿಳೆಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆ ಭೀಕರ ದೃಶ್ಯಗಳು ಇಂದಿಗೂ ನಮ್ಮ ಕಣ್ಣಮುಂದಿದೆ.

ಈ ಪ್ರಕರಣ ನಡೆದಾಗ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಾದ ಮಾನ್ಯ ಯೋಗಿವಆದಿತ್ಯನಾಥ್ ಹಾಗೂ ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರಮೋದಿಯವರು, ಘಟನೆ ಕುರಿತಂತೆ ತತಕ್ಷಣ ಒಂದು ಸಂತಾಪದ ಹೇಳಿಕೆಯನ್ನೂ ನೀಡಲಿಲ್ಲ. ಒಬ್ಬ ಮಹಿಳೆಯಾಗಿ ಶ್ರೀಮತಿ ಸ್ಮೃತಿ ಇರಾನಿಯವರು ಖಂಡಿಸಲಿಲ್ಲ.

ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ರೆಯ ಕುಟುಂಬದವರಿಗೆ ಆಕೆಯ ಶವವನ್ನು ನೀಡದೆ, ಮಾಹಿತಿ ಇಲ್ಲದೆ ಆಕೆಯನ್ನು ಸುಟ್ಟ ರೀತಿ ಬಿಜೆಪಿಯ ದುರಾಡಳಿತಕ್ಕೆ ಕೈಗನ್ನಡಿಯಾಗಿದೆ. ಅಂದು ರಾಷ್ಟ್ರೀಯ ಮಹಿಳಾ ಆಯೋಗ & ಬಿಜೆಪಿ ಮಹಿಳಾ ಮೋರ್ಚಾ ಮೌನವ್ರತ ಆಚರಿಸಿದವು. ಅಲ್ಲದೆ ಸಂತ್ರಸ್ತೆಯ ಕುಟುಂಬದವರಿಗೆ ಸಾಂತ್ವಾನ ಹೇಳ ಹೊರಟ ಕಾಂಗ್ರೆಸ್ ಪಕ್ಷದ ನಾಯಕಿ ಶ್ರೀಮತಿ ಪ್ರಿಯಾಂಕಗಾಂಧಿಯವರಿಗೆ, ಎದುರಿನಿಂದ ಅವರ ಬಟ್ಟೆಯನ್ನು ಹಿಡಿದು ಎಳೆದಾಡಿ, ಅವರೊಂದಿಗೆ ಅವಮಾನವೀಯವಾಗಿ ನಡೆದುಕೊಂಡ ಪೊಲೀಸರ ದುರ್ವತನೆ ಬಿಜೆಪಿಯ ದಬ್ಬಾಳಿಕೆಗೆ ಮತ್ತೊಂದು ಸಾಕ್ಷಿಯಾಗಿತ್ತು.

ಹಾಗೆಯೇ ಇತ್ತೀಚಿಗೆ ನಡೆದ ಮಣಿಪುರದ ಘಟನೆಯಂತೂ, ಅನಾಗರಿಕ ಪುರುಷಮೃಗಗಳ ಅಟ್ಟಹಾಸಕ್ಕೆ ಒಂದು ನಿದರ್ಶನವಾಗಿತ್ತು. ಇಡೀ ದೇಶವೇ ಈ ಪ್ರಕರಣವನ್ನು ಖಂಡಿಸಿ ಹೋರಾಟ ಮಾಡಿದರೂ, ಇಂದಿಗೂ ಸಂತ್ರಸ್ತೆಯರು ನ್ಯಾಯ ಸಿಗದೇ ಕತ್ತಲ ಕೋಣೆಯಲ್ಲಿ ಕಾಲ ಕಳೆಯುತ್ತಿದ್ದಾರೆ.

ಈ ಪ್ರಕರಣದಲ್ಲಿಯೂ ಮಾನ್ಯ ಮೋದಿಯವರು ತತಕ್ಷಣವೇ, ಒಂದೇ ಒಂದು ಸಂತಾಪದ ಹೇಳಿಕೆಯನ್ನು ನೀಡಲಿಲ್ಲ. ರಾಷ್ಟ್ರೀಯ ಮಹಿಳಾ ಆಯೋಗ ಯಾವುದೇ ಪ್ರತಿಕ್ರಿಯೆ ನೀಡದೆ ಮೌನವ್ರತ ಆಚರಿಸಿತು. ಶ್ರೀಮತಿ ಸ್ಮೃತಿ ಇರಾನಿಯವರಿಗೆ ತಾವೊಬ್ಬ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿ, ಸಂತ್ರಸ್ತರಿಗೆ ಸಾಂತ್ವಾನ ಹೇಳುವ ಸೌಜನ್ಯವೂ ತೋರಿಸಲಿಲ್ಲ. ಮೇಲಾಗಿ ದೇಶದ ಬುಡಕಟ್ಟು ಜನಾಂಗದ ದಲಿತ ಮಹಿಳಾ ರಾಷ್ಟ್ರಪತಿಗಳು ಕೂಡ ತಮ್ಮನ್ನು ಆಯ್ಕೆ ಮಾಡಿದ ಪಕ್ಷಕ್ಕೆ ನಿಷ್ಠೆ ತೋರಿದರು.



**ಶೈಲಜಾ ಹಿರೇಮಠ**
ಗಂಗಾವತಿ
ರಾಜ್ಯ ವಕ್ತಾರರು ಕಾಂಗ್ರೆಸ್ ಪಕ್ಷ.

ಆದರೆ ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದ ಅಂತಹದೇ ಒಂದು ಅಹಿತಕರ ಭೀಕರ ಪ್ರಕರಣ ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ಒಂದು ಕಪ್ಪು ಚುಕ್ಕೆ. ಯಾವುದೋ ಕ್ಷುಲ್ಲಕ ಕಾರಣಕ್ಕಾಗಿ ಮಹಿಳೆಯ ಮೇಲಿನ ಈ ಅವಮಾನವೀಯ ಹಿಂಸಾಕೃತ್ಯವನ್ನು ಕರ್ನಾಟಕದ ಜನತೆ ಎಂದು ಸಹಿಸುವುದಿಲ್ಲ. ಕಾಕತಾಳೀಯವೆಂಬತೆ, ಅದೇ ಸಮಯದ ಆಸುಪಾಸಿನಲ್ಲಿ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ನೆಡೆಯುವ ಸಂದರ್ಭದಲ್ಲಿ ಬೆಳಕಿಗೆ ಬಂದ ಈ ಘಟನೆಯನ್ನು ಕರ್ನಾಟಕದ ಕಾಂಗ್ರೆಸ್ ಪಕ್ಷದ ಸರ್ಕಾರ ತೀವ್ರವಾಗಿ ಖಂಡಿಸಿತು.

ಮಾನ್ಯ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು, ತತಕ್ಷಣ ಈ ಘಟನೆಯನ್ನು ತೀವ್ರವಾಗಿ ಖಂಡಿಸುವುದರೊಂದಿಗೆ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಗೆ ಶಿಫಾರಸು ಮಾಡಿದರು ಮತ್ತು ತನಿಖೆಗೂ ಆದೇಶ ಮಾಡಿದರು. ರಾಜ್ಯದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಲಕ್ಮೀ ಹೆಬ್ಬಾಳಕರ್ ಸಂತ್ರಸ್ತೆಗೆ ಸಾಂತ್ವಾನ ಹೇಳುವುದರೊಂದಿಗೆ, ಆಕೆಗೆ ಸುರಕ್ಷತೆಯನ್ನು ಒದಗಿಸಿಕೊಟ್ಟರು. ಅಷ್ಟೇ ಅಲ್ಲದೆ ಸಂತ್ರಸ್ತೆಯ ಆರ್ಥಿಕ ನಿರ್ವಹಣೆಗಾಗಿ ಎರಡು ಎಕರೆ ಭೂಮಿಯನ್ನು ಸರ್ಕಾರದಿಂದ ಕೊಡಿಸುವುದರೊಂದಿಗೆ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದಂತಹ ಮಾನ್ಯ ಸತೀಶ್ ಜಾರಕಿಹೊಳಿಯವರು ಮಾನವೀಯತೆ ಮೆರೆದರು. ಇದು ಸರ್ಕಾರದ ಜವಬ್ದಾರಿಯೆನ್ನುವುದನ್ನು ಅರಿತು ನೆಡೆದರು.

ಉತ್ತರ ಭಾರತದ ಎರಡು ಘಟನೆಗಳು ನಡೆದಾಗ ತತಕ್ಷಣ ಸ್ಪಂದಿಸದ ಬಿಜೆಪಿ ಸರ್ಕಾರ ಮತ್ತು ರಾಷ್ಟ್ರೀಯ ಮಹಿಳಾ ಆಯೋಗ ಹಾಗೂ ರಾಷ್ಟ್ರಾಧ್ಯಕ್ಷರಾದ ನಡ್ಡಾ, ರಾಜ್ಯದ ಬಿಜೆಪಿ ನಾಯಕರುಗಳು, ಬಿಜೆಪಿ ಮಹಿಳಾ ಮೋರ್ಚಾದವರು, ಬೆಳಗಾವಿ ಘಟನೆಯನ್ನು ಖಂಡಿಸಿ ಹೇಳಿಕೆ ಕೊಡುತ್ತಿರುವುದು ಅದೆಷ್ಟು ಸರಿ? ಮಂಡ್ಯದಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಹಮ್ಮಿಕೊಂಡ ಪ್ರತಿಭಟನೆಯಲ್ಲಿ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ್ ಅವರು ಬೆಳಗಾವಿ ಪ್ರಕಟಣೆಯನ್ನು ಖಂಡಿಸುವ ಬದ್ಧತೆ ಇರುವಷ್ಟು, ರಾಜ್ಯದಲ್ಲಿ ನಿರಂತರವಾಗಿ ನಡೆಯುತ್ತಿರುವ ಅನೇಕ ಇಂತಹ ಹೇಯಕೃತ್ಯಗಳಿಗೆ ಅದೆಷ್ಟು ಸ್ಪಂದನೆ ನೀಡಿದ್ದಾರೆ ಎಂಬುದು ತಮಗೆ ತಾವೇ ಮನವರಿಕೆ ಮಾಡಿಕೊಳ್ಳಬೇಕು.

ಕೊಪ್ಪಳ ಜಿಲ್ಲೆಯವರಾದ ವಿಧಾನ ಪರಿಷತ್ತಿನ ಸದಸ್ಯರಾದ, ನನ್ನ ಸ್ನೇಹಿತರು ಆದ ಶ್ರೀಮತಿ ಹೇಮಲತಾ ನಾಯಕ ಅವರು ಕೂಡ ಬೆಳಗಾವಿ ಘಟನೆ ಖಂಡಿಸಿ ಪ್ರತಿಭಟನೆಮಾಡಿದರು, ಅವರು ಮೇಲಿನ ಘಟನೆಗಳಿಗೆ ಯಾಕೆ ಸ್ಪಂದಿಸಲಿಲ್ಲ ? ಅಂದರೆ, ಬಿಜೆಪಿ ರಾಜಕೀಯದ ಲಾಭಕ್ಕಾಗಿ, ಮಹಿಳೆಯರ ಇಂತಹ ಹೀನಕೃತ್ಯಗಳನ್ನು



ಬಳಸಿಕೊಳ್ಳುತ್ತಿದೆಯೇ? ಅದರಲ್ಲೂ ರಾಷ್ಟ್ರೀಯ ಮಹಿಳಾ ಆಯೋಗದವರು ಹಾಗೂ ರಾಷ್ಟ್ರೀಯ ಬಿಜೆಪಿ ಮಹಿಳಾ ನಾಯಕಿಯರು ಇಂದು "ಸತ್ಯಶೋಧನಾ ಸಮಿತಿ" ರಚನೆ ಮಾಡಿಕೊಂಡು ಬೆಳಗಾವಿಗೆ ಆಗಮಿಸಿರುವುದು ಇವರ ಬಂಢತನವಲ್ಲದೆ ಇನ್ನೇನು ?

ಮಹಿಳೆ ಶತಮಾನಗಳಿಂದಲೂ ಶೋಷಿತಳು. ಇಂದಿಗೂ ಆಕೆಯನ್ನು ದ್ವಿತೀಯ ದರ್ಜೆಯ ಪ್ರಜೆಗಳಾಗಿ ನೋಡುತ್ತಿರುವುದು ಅಮಾನವೀಯ. ಈ ಹಿಂದೆ ಎಲ್ಲಾ ಪಕ್ಷದವರ ಆಡಳಿತದಲ್ಲಿಯೂ ಇಂತಹ ಅನೇಕ ಕೃತಗಳು ಜರುಗಿವೆಯಾದರೂ ಹಿಂದಿನ ಯಾವುದೇ ಸರ್ಕಾರಗಳು ಪ್ರಕರಣ ಬೆಳಕಿಗೆ ಬಂದಾಕ್ಷಣ ತೀವ್ರವಾಗಿ ಖಂಡಿಸಿ ಸಂತ್ರಸ್ತೆಯರ ಪರವಾಗಿ ನಿಂತು ನಿಷ್ಪಕ್ಷ ಧೋರಣೆ ತಾಳುತ್ತಿದ್ದವು.

ಯಾವ ನಿರ್ಭಯ ಪ್ರಕರಣವನ್ನು ಆಯುಧವನ್ನಾಗಿಟ್ಟುಕೊಂಡು ಚುನಾವಣಾ ರ್‍ಯಾಲಿಗಳನ್ನು ಮಾಡಿ ಆಡಳಿತಕ್ಕೆ ಬಂದ ಬಿಜೆಪಿಯವರೋ, ಅಧಿಕಾರ ಬಂದ ಮೇಲೆ ಮಹಿಳೆಯರಿಗೆ ನ್ಯಾಯ ಕೊಡಿಸಲು ಎಂದೂ ಒತ್ತಾಸೆಯಾಗಿ ನಿಲ್ಲಲಿಲ್ಲ. ಆದರೆ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀ ಮನಮೋಹನ್ ಸಿಂಗ್ ಅವರು ನಿರ್ಭಯ ಪ್ರಕರಣವನ್ನು ಖಂಡಿಸಿ, ಅದನ್ನು ಗಂಭೀರವಾಗಿ ಪರಿಗಣಿಸಿ ಇಂತಹ ಪ್ರಕರಣಕ್ಕಾಗಿಯೇ, "ತ್ವರಿತ ನ್ಯಾಯಾಲಯ" ಗಳ ನಿರ್ಮಾಣ ಮಾಡಿ ತ್ವರಿತಗತಿಯಲ್ಲಿ ಆಕೆಯ ಪ್ರಕರಣಕ್ಕೆ ನ್ಯಾಯಸಿಗುವಲ್ಲಿ ಮಾನವೀಯತೆ ಮೆರೆದರು. ಅಲ್ಲದೆ ಕಾಂಗ್ರೆಸ್ ಪಕ್ಷದ ನಾಯಕರಾದ ರಾಹುಲ್ ಗಾಂಧಿಯವರು ನಿರ್ಭಯ ಸಹೋದರನ ಸಂಪೂರ್ಣ ವಿದ್ಯಾಭ್ಯಾಸದ ಹೊಣೆ ಹೊತ್ತರು.

ಆದರೆ, ಇಂದು ಕರ್ನಾಟಕದ ಈ ಪ್ರಕರಣವನ್ನು ಮುಂದಿಟ್ಟುಕೊಂಡು ಬಿಜೆಪಿ ರಾಜಕಾರಣ ಮಾಡುತ್ತಿರುವುದು ಸರಿಯೇ? ಮಹಿಳೆಯರ ಇಂತಹ ಹೀನಕೃತ್ಯಗಳನ್ನು ತಮ್ಮ ರಾಜಕೀಯ ತೆವಲಿಗೆ ಬಳಸಿಕೊಳ್ಳುವ ಬಿಜೆಪಿ ಪಕ್ಷದ ಈ "ಸತ್ಯ ಶೋಧನಾ ಸಮಿತಿ"ಯು , ಸಂತ್ರಸ್ತರಿಗೆ ಯಾವ ರೀತಿ ನ್ಯಾಯ ಕೊಡಬಲ್ಲದು? ಎನ್ನುವುದನ್ನು ಕಾದು ನೋಡಬೇಕು. ಅದೇನೇ ಇರಲಿ ಮಹಿಳೆಯರ ಮೇಲಿನ ಇಂತಹ ದೌರ್ಜನ್ಯಗಳು ಮತ್ತು ಹಿಂಸಾಚಾರ ನಡೆದಾಗ ಪಕ್ಷಭೇದ ಮರೆತು ಮಹಿಳೆಯರ ಜೊತೆ ನಿಲ್ಲುವುದು ನಾಗರಿಕ ಸಮಾಜದ ಕರ್ತವ್ಯ ಮತ್ತು ಜವಾಬ್ದಾರಿ . ಇದನ್ನು ಆಡಳಿತ ಮಾಡುವ ಯಾವುದೇ ಪಕ್ಷದವರು ಅರ್ಥಮಾಡಿಕೊಳ್ಳಬೇಕು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com

# ಸುಕಾರ್ಯದಿಂದ ಮೃತ್ಯುವನ್ನೆ ಗೆದ್ದ ಯುವಕ

ಅದೊಂದು ದಟ್ಟವಾದ ಕಾಡು, ಆ ಕಾಡಿನಲ್ಲಿ ಇರುವ ಕೊಳದ ಬಳಿ ವೃದ್ಧನೊಬ್ಬ ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಾ ಮಲಗಿದ್ದನು. ಆತನೊಂದಿಗೆ ಬೇರೆ ಯಾರೂ ಇರಲಿಲ್ಲ. ತುಂಬಾ ಬಾಯಾರಿಕೆಯಿಂದ ಬಳಲುತ್ತಿದ್ದ ಆತ ಯಾರಾದರೂ ಸ್ವಲ್ಪ ನೀರು ಕೊಡಿ ಎಂದು ಕೇಳುತ್ತಿದ್ದನು. ಆದರೆ ಆ ದಟ್ಟ ಕಾಡಿನಲ್ಲಿ ಆತನ ಅಳಲನ್ನು ಕೇಳುವವರು ಯಾರೂ ಇರಲಿಲ್ಲ.

ಕೆಲ ಸಮಯದ ಬಳಿಕ ಆ ಹಾದಿಯಲ್ಲಿ ಓರ್ವ ಯುವಕ ಹಾದು ಹೋಗುತ್ತಿದ್ದ. ವೃದ್ಧನ ಮೊರೆ ಆತನ ಕಿವಿಗೆ ಬಿದ್ದರೂ ಕೂಡ, ಕೇಳಿಯೂ ಕೇಳದವರಂತೆ ಆ ಯುವಕ ಅಲ್ಲಿಂದ ಸಾಗಿ ಮುಂದೆ ಹೋದ. ಕೆಲ ನಿಮಿಷಗಳ ದಾರಿಯನ್ನು ಕ್ರಮಿಸಿದ್ದನಷ್ಟೇ ಕೊಂಚ ವಿಶ್ರಾಂತಿ ತೆಗೆದುಕೊಳ್ಳೋಣ ಎಂದು ಮರವೊಂದರ ಕೆಳಗೆ ಕುಳಿತುಕೊಂಡನು. ಆದರೆ ಏನಾಶ್ಚರ್ಯ! ಆತನಿಗೆ ಮರದ ಅಡಿಯಲ್ಲಿ ಒಂದು ಪುಟ್ಟ ದುಡ್ಡಿನ ಚೀಲ ದೊರಕಿತು. ಅತ್ಯಂತ ಸಂತಸದಿಂದ ಆತ ಆ ದುಡ್ಡಿನ ಚೀಲವನ್ನು ತೆಗೆದುಕೊಂಡು ತನ್ನ ಮನೆಯತ್ತ ಸಾಗಿದ.

ಕಾಡಿನ ಇನ್ನೊಂದು ಭಾಗದಿಂದ ಮತ್ತೋರ್ವ ಯುವಕ ಕೊಳದ ಮಾರ್ಗವಾಗಿ ಹಾದು ಹೋಗುತ್ತಿದ್ದ. ವೃದ್ಧನ ಪ್ರಲಾಪ ಆತನ ಕಿವಿಗೂ ಬಿದ್ದಿತ್ತು. ಕೂಡಲೇ ಧಾವಿಸಿ ಕೊಳದ ಬಳಿ ಹೋದ



ಈ ಯುವಕ ವೃದ್ಧನ ಕೋರಿಕೆಯಂತೆ ನೀರು ಕುಡಿಸಲು ಯೋಜಿಸಿದ. ಆದರೆ ಅಲ್ಲೆಲ್ಲಿಯೂ ನೀರು ಕುಡಿಸಲು ಬೇಕಾದ ಪಾತ್ರೆಯಿರಲಿಲ್ಲ. ಕೂಡಲೇ ಕಾರ್ಯ ಮಗ್ನನಾದ ಆ ಯುವಕ ಮರದ ನಾಲ್ಕು ದೊನ್ನೆಗಳನ್ನು ಒಂದಕ್ಕೊಂದು ಕೂಡಿಸಿ ಅವುಗಳನ್ನು ಹೆಣೆದು ಅದರಲ್ಲಿ ಕೊಳದ ನೀರನ್ನು ತುಂಬಿ ತಂದು ಆ ವೃದ್ಧ ರೋಗಿಗೆ ಕುಡಿಸಿದನು. ವೃದ್ಧ ರೋಗಿಯು ಕೊಂಚ ಚೇತರಿಸಿಕೊಂಡ ನಂತರ ತನ್ನ ಹಾದಿ ಹಿಡಿದು ಹೊರಟನು. ತುಸು ದೂರ ಸಾಗಿದ ಯುವಕ ಮುಂದೆ ಕಲ್ಲನ್ನು ಎಡವಿ ನೆಲಕ್ಕೆ ಜೋರಾಗಿ ಬಿದ್ದನು. ಆತನ ಹಣೆಗೆ ತಾಕಿ ರಕ್ತ ಬಂದಿತು. ಅಲ್ಲಿಯೇ ಕುಳಿತುಕೊಂಡು ಕೊಂಚ ಸಾವರಿಸಿಕೊಂಡ ಆ ಯುವಕ ತನ್ನ ಮನೆಯತ್ತ ನಿಧಾನವಾಗಿ ಹೆಜ್ಜೆ ಹಾಕಿದನು.

ಅವರವರ ಕರ್ಮಫಲವನ್ನು ಅವರವರೇ ಉಣ ಬೇಕು ಎಂಬುದನ್ನು ನಿನಗೆ ತೋರಿಸುತ್ತೇನೆ ಎಂದ ಪರಶಿವನು ಪತ್ನಿ ಪಾರ್ವತಿ ದೇವಿಗೆ ಭೂಲೋಕದಲ್ಲಿ ನಡೆದ ಈ ಕೃತ್ಯವನ್ನು ತೋರಿಸಿದನು. ಅಸಮಾಧಾನ ಗೊಂಡ ಪಾರ್ವತಿ ದೇವಿಯು ಮಹಾದೇವ ಇದೆಂತಹ ರೀತಿ ನಿಮ್ಮದು!!. ಅಸಹಾಯಕ ವೃದ್ಧನನ್ನು ತಿರುಗಿಯೂ ನೋಡದ ಯುವಕನಿಗೆ ಹಣದ ಥೈಲಿಯನ್ನು ನೀಡಿದಿರಿ. ವೃದ್ಧನಿಗೆ ತನ್ನ ಕೈಲಾದಂತೆ ನೀರನ್ನು ಕುಡಿಸಿ ಸಮಾಧಾನಗೊಳಿಸಿದ ಇನ್ನೋರ್ವ ಯುವಕನಿಗೆ ಗಾಯವಾಗುವಂತೆ ಮಾಡಿದಿರಿ. ಏನಿದು ಅನರ್ಥ? ಇದು ನಿಮಗೆ ಸಮ್ಮತವೇ! ಎಂದು ಕೇಳಿದಳು.

ಪರಶಿವನು ಸುಮ್ಮನೇ ನಸು ನಕ್ಕನು. ಇದರಿಂದ ಮತ್ತಷ್ಟು ಕಸಿವಿಸಿಕೊಂಡ ಪಾರ್ವತಿ ದೇವಿ ... ದೇವಾದಿದೇವ, ಮಹಾದೇವ ನಿಮ್ಮಿಂದ ಈ ಅಪರಾಧವನ್ನು ನಾನು ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ತುಸು ಮುನಿದು ಕುಳಿತಳು. ದೇವರಾದರೇನು ಪತ್ನಿಯ ಮುನಿಸು ಮಹಾದೇವನಿಗೂ ಕಷ್ಟವೇ!? ಕೂಡಲೇ ಪಾರ್ವತಿ ದೇವಿಯ ಗದ್ದವನ್ನು ಹಿಡಿದು ಆಕೆಯ ಮುಖವನ್ನು ತನ್ನೆಡೆಗೆ ತಿರುಗಿಸಿಕೊಂಡ ಶಿವನು "ದೇವಿ.... ಯಾವುದೇ ರೀತಿಯ ಸಹಾಯ ಮಾಡದ ಮೊದಲ ಯುವಕನ ಭಾಗ್ಯದಲ್ಲಿ ಇಂದು ದೊಡ್ಡ ಖಜಾನೆಯೇ ದೊರಕುವ ಅವಕಾಶ ಇತ್ತು. ಆದರೆ ತನ್ನ ಸ್ವಯಂಕೃತ ಅಪರಾಧದಿಂದ ಆತ ಆ ಅವಕಾಶವನ್ನು ಕಳೆದುಕೊಂಡು ಕೇವಲ ಒಂದು ಪುಟ್ಟ ಹಣದ ಥೈಲಿ ಪಡೆದುಕೊಂಡ. ಇನ್ನೋರ್ವ ಯುವಕನಿಗೆ ಇಂದು ಮೃತ್ಯು ಹಣೆಯಲ್ಲಿ ಬರೆದಿತ್ತು. ಆದರೆ ತನ್ನ ಸುಕಾರ್ಯದಿಂದ ಆ ಯುವಕನು ಕೇವಲ ತರಚು ಗಾಯಕ್ಕೆ ಈಡಾಗಿ ಮೃತ್ಯುವಿನಿಂದ ಪಾರಾದನು. ಈಗ ಹೇಳು ಅವರವರ ಕರ್ಮಫಲವನ್ನು ಅವರವರೇ ಉಣ್ಣುತ್ತಿದ್ದಾರೆ ಎಂಬ ನನ್ನ ಮಾತು ಸರಿಯಲ್ಲವೇ?

ಕೂಡಲೇ ಪಾರ್ವತಿ ದೇವಿಯು ಸುಮನಸ್ಕಳಾದಳು. ಖಂಡಿತವಾಗಿಯೂ ನೀವು ಹೇಳುವುದು ಸರಿ ಎಂದು ಒಪ್ಪಿಕೊಂಡಳು.

ಕರ್ಮದ ಫಲಾಫಲಗಳು ಏನೇ ಇರಲಿ... ಒಳ್ಳೆಯದನ್ನು ಮಾಡುವ ಅವಕಾಶಗಳನ್ನು ನಮಗೆ ದೇವರೇ ಕಲ್ಪಿಸಿ ಕೊಡುತ್ತಾನೆ. ಅಂತಹ ಸಮಯದಲ್ಲಿ ನಾವು ಕಾರ್ಯೋನ್ಮುಖರಾಗಿರಬೇಕು. ನಮ್ಮ ಪಾಲಿಗೆ ಬಂದ ಕರ್ತವ್ಯಗಳನ್ನು ನಿಭಾಯಿಸಬೇಕು. ಅಲ್ಲವೇ ಸ್ನೇಹಿತರೆ??

**– ವೀಣಾ ಹೇಮಂತ್ ಗೌಡ ಪಾಟೀಲ್**
ಮುಂಡರಗಿ ಗದಗ್

# ಜಾನುವಾರುಗಳಿಗೆ ನೀರು, ಮೇವು ಒದಗಿಸಿ

## ಶಾಸಕ ಕೆ.ನೇಮಿರಾಜ್ ನಾಯ್ಕ್ ಅಧಿಕಾರಿಗಳಿಗೆ ಖಡಕ ಸೂಚನೆ । ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಕ್ರಮವಹಿಸಿ । ಸಾಮಾನ್ಯ ಸಭೆ

■ **ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕನ್ನು ಸರ್ಕಾರ ಬರಪೀಡಿತ ಪ್ರದೇಶ ಎಂದು ಘೋಷಿಸಿದ್ದು, ಬರಗಾಲ ದುದ್ದಕ್ಕು ಜಾನುವಾರುಗಳಿಗೆ ನೀರು ಮೇವಿನ ಕೊರತೆ ಉಂಟಾಗದಂತೆ ಕಾಯ್ದುಕೊಳ್ಳಬೇಕು ಹಾಗೆ ಜನರಿಗೆ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಸಂಬಂಧ ಪಟ್ಟ ಅಧಿಕಾರಿಗಳು ಜಾಗೃತಿ ವಹಿಸಬೇಕು ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ಖಡಕ ಸೂಚನೆ ನೀಡಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ಕಚೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಶನಿವಾರ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಕಲ ಸಿದ್ದತೆಗಳೊಂದಿಗೆ ಈ ವರ್ಷದ ಬರಗಾಲವನ್ನು ಸಮರ್ಥವಾಗಿ ಎದುರಿಸಲು ಮುಂದಾಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಪಂ ಗಳಲ್ಲಿ, ಸರ್ಕಾರದ ಯೋಜನೆಗಳನ್ನು ಮತ್ತು ಸೌಲಭ್ಯವನ್ನು ಸಮರ್ಪಕವಾಗಿ ಜನರಿಗೆ ತಲುಪುವಂತೆ ಕಾರ್ಯನಿರ್ವಹಿಸಿ,ಇದರಲ್ಲಿ ರಾಜಕಾರಣ ಮಾಡಿದರೆ ಆಯಾ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.




ಪಶು ಸಂಗೋಪನೆ ಇಲಾಖೆ ವೈದ್ಯಾಧಿಕಾರಿ ಡಾ. ಕೊಟ್ರೇಶ್ ಮಾತನಾಡಿ

ಮುಂಜಾಗ್ರತೆಯಾಗಿ ಮುಂದಿನ 20 ವಾರಗಳಿಗಾಗುವಷ್ಟು ಮೇವು ಸಂಗ್ರಹವಾಗಿದ್ದು, ನಂತರದ ದಿನಗಳಿಗೂ ಅಗತ್ಯವಿರುವಷ್ಟು ಮೇವನ್ನು ರೈತರಲ್ಲಿರುವ ಹೆಚ್ಚುವರಿ ಮೇವನ್ನು ಖರೀದಿಸಲು ಮುಂದಾಗಿರುವುದಾಗಿ

ಸಭೆಗೆ ತಿಳಿಸಿದರು, ಪ್ರತಿಕ್ರಿಯಿಸಿದ ಶಾಸಕರು ಮೇವಿನ ಜೊತೆ ನೀರಿನ ಸೌಕರ್ಯಕ್ಕೂ ವ್ಯವಸ್ಥೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.

ತಾಲ್ಲೂಕಿನಾದ್ಯಂತ ಬಹುತೇಕ ರೈತರಿಂದ ಎಫ್ ಐ ಡಿ ನೋಂದಣಿ ಕಾರ್ಯ ನಡೆದಿದೆ ಎಂದು ಕೃಷಿ ಇಲಾಖಾಧಿಕಾರಿ ರಮೇಶ್ ತಿಳಿಸಿದರು. ಹನಿ ನೀರಾವರಿ ಸೌಲಭ್ಯಗಳಿಗೆ ಫಲಾನುಭವಿಗಳಿಂದ ಅರ್ಜಿಗಳನ್ನು ಸ್ವೀಕರಿಸಿದ್ದು ಅರ್ಹ ಫಲಾನುಭವಿಗಳ ಆಯ್ಕೆಯಾದ ಕೂಡಲೇ ರಿಯಾಯತಿ ಧರದಲ್ಲಿ ಸೌಕರ್ಯ ಕಲ್ಪಸಲಾಗುವುದು ಎಂದು ತೋಟಗಾರಿಕಾ ಇಲಾಖಾಧಿಕಾರಿ ರಮೇಶ್ ಶಾಸಕರಿಗೆ ತಿಳಿಸಿದರು.

ಈ ವರ್ಷ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶ ಸುಧಾರಣೆಗೆ ಅಗತ್ಯ ಕ್ರಮ ಕೈಗೊಳ್ಳಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭ ಕರಣಂ ಇವರಿಗೆ ಸೂಚಿಸಿದರು. ಹಾಸ್ಟೆಲ್ ಗಳಲ್ಲಿ ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯ ವ್ಯತ್ಯಯವಾಗದಂತೆ ನೋಡಿಕೊಳ್ಳಿ ಎಂದು ಸಮಾಜ ಕಲ್ಯಾಣ ಇಲಾಖಾಧಿಕಾರಿ ಜಗದೀಶ್ ದಿಗಡೂರ್ ಇವರಿಗೆ ಸೂಚಿಸಿದರು.

ತಹಶೀಲ್ದಾರ್ ಹಾಗೂ ತಾಲ್ಲೂಕು ಪಂಚಾಯ್ತಿ ಎರಡು ಕಚೇರಿಗಳನ್ನು ಬಿಟ್ಟರೆ ಯಾವುದೇ ತಾಲ್ಲೂಕು ಮಟ್ಟದ ಕಚೇರಿಗಳು ಕೊಟ್ಟೂರಿನಲ್ಲಿ ಪ್ರಾರಂಭಿಸದಿರುವುದರಿಂದ ಕೂಡ್ಲಿಗಿ ತಾಲ್ಲೂಕು ಮಟ್ಟದ ಅಧಿಕಾರಿಗಳು ತಮ್ಮ ಅಧೀನದಲ್ಲಿರುವ ಅಧಿಕಾರಿಗಳನ್ನು ಸಭೆಗೆ ಕಳುಹಿಸುವುದರಿಂದ ಕೊಟ್ಟೂರು ತಾಲ್ಲೂಕಿಗೆ ಸಂಬಂಧಿಸಿದಂತೆ ನಿಖರ ಅಂಕಿ ಅಂಶಗಳು ಹಾಗೂ ಮಾಹಿತಿ ಸಭೆಯಲ್ಲಿ ನೀಡದಿರುವುದು ಮೇಲ್ನೋಟಕ್ಕೆ ಕಂಡು ಬಂದಿತು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯ್ತಿ ಆಡಳಿತಾಧಿಕಾರಿ ಶರಣಪ್ಪ ಮುದ್ಗಲ್ ಕಾರ್ಯನಿರ್ವಾಹಕ ಅಧಿಕಾರಿ ವೈ. ರವಿಕುಮಾರ್, ತಹಶೀಲ್ದಾರ್ ಅಮರೀಶ್ ಜಾಲಹಳ್ಳಿ, ನರೇಗಾ ಸಹಾಯಕ ನಿರ್ದೇಶಕ ಎಚ್.ವಿಜಯಕುಮಾರ್ ಮುಂತಾದ ಅಧಿಕಾರಿಗಳು ಪಾಲ್ಗೊಂಡಿದ್ದರು.

## ಕವಿ ಮನಸು

### ಪ್ರೇಮ ಎನ್ನುವೆ ಅಷ್ಟೇ...!

ಅಬ್ಬಾ
ಈ ರಾತ್ರಿಗೆ ನಿದ್ರೆಎಂಬುದಿಲ್ಲ
ಈ ಹಗಲಿಗೆ ಎಚ್ಚರವೆಂಬುದಿಲ್ಲ

ಬೆಳಕು ಕತ್ತಲೆಯ ಪರಿವೆಯೇ ಇಲ್ಲ
ಬಟ್ಟೆ ಬೆತ್ತಲೆಯ ಅರಿವೆಯೆ
ಇಲ್ಲ

ಆದರೆ,
ಆದರೇ ..!
ಅದ್ಯತರದ್ದೋ ತೆರೆದು ಕೊಳ್ಳುವ ಭಯ

ಏನನ್ನೋ ತೊರೆದಂತೆ ಹಗುರ

ಮತ್ತೆ ಮತ್ತೆ ಕುಣಿಯುವುದು
ಕಾಲುಗಳ ನೋವಿಲ್ಲದೆ
ಮತ್ತೆ ಮತ್ತೆ ಕಳೆದು ಹೋಗುವುದು
ಕಾಲಗಳ ಕಾವಿಲ್ಲದೆ

ನೀವಿದಕ್ಕೆ ಹುಚ್ಚುತನವೆನ್ನಿ
ನಾನಿದಕ್ಕೆ ಪ್ರೇಮ ಎನ್ನುವೆ ಅಷ್ಟೇ...!

– ವಿಶಾಲ್ ಮ್ಯಾಸರ್
ಹೊಸಪೇಟೆ

# ನಾಟಕಗಳು ಸಮಾಜದ ಪ್ರತಿಬಿಂಬ

## ಅಧ್ಯಾಪಕ ಡಾ. ಮಲ್ಲಯ್ಯ ಹೇಳಿಕೆ । ಮರಿಯಮ್ಮನಹಳ್ಳಿಯಲ್ಲಿ ಬರ್ಗಲ್ಲು ನಾಟಕ ಪ್ರದರ್ಶನ



■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ರಂಗಭೂಮಿ ಮಾಧ್ಯಮ ಮೊಬೈಲ್ ಜಗತ್ತಿಕ್ಕಿಂತ ಮಿಗಿಲಾದದ್ದು ಎಂದು ನಂದಿಹಳ್ಳಿಯ ಸ್ನಾತಕೋತ್ತರ ಕೇಂದ್ರದ ಕನ್ನಡ ಅಧ್ಯಯನ ವಿಭಾಗದ ಅಧ್ಯಾಪಕ ಡಾ. ಮಲ್ಲಯ್ಯ ಹೇಳಿದರು.

ಇಲ್ಲಿನ ದುರ್ಗದಾಸ್ ಕಲಾಮಂದಿರದಲ್ಲಿ ಭಾನುವಾರ ರಾತ್ರಿ ನಡೆದ ಬಿ. ಲಿಂಗಮ್ಮ, ಡಾ. ಬಿ. ಅಂಬಣ್ಣ, ಡಿ. ದುರ್ಗಾದಾಸ್ ಹಾಗೂ ಗಿರಿಜಮ್ಮ ಕರಿಬಸಪ್ಪ ಇವರ ದತ್ತಿ ನೆರವಿನೊಂದಿಗೆ ಲಲಿತಕಲಾ ರಂಗದ 38ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಕಲಾನಿಧಿ ಪ್ರಶಸ್ತಿ ಪ್ರದಾನ ಹಾಗೂ ಬರ್ಗಲ್ಲು ನಾಟಕ ಪ್ರದರ್ಶನದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಮೊಬೈಲ್ ಜಗತ್ತಿನಲ್ಲಿ ಸಿನಿಮಾ ಕಡಿಮೆಯಾಗುತ್ತಿರುವ ಇಂದಿನ ದಿನಮಾನಗಳಲ್ಲಿ ಮೊಬೈಲ್‌ನ್ನು ಮೀರಿಸುವಂತಹ ಕಲಾ ಮಾಧ್ಯಮ ರಂಗಭೂಮಿಯಾಗಿದೆ. ಈ ರಂಗಭೂಮಿಯನ್ನು ಉಳಿಸಿ ಬೆಳೆಸುವಂತಹ ಮಹತ್ವರ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ನಾಟಕಗಳು ಸಮಾಜದ ಪ್ರತಿಬಿಂಬವಿದ್ದಂತೆ, ಪುರಾತನ ಕಾಲದಲ್ಲಿ ಸಮಾಜದಲ್ಲಿ ಮನೆ ಮಾಡಿದ್ದ ಮೌಢ್ಯವನ್ನು ನಾಟಕಗಳ ಮೂಲಕ ಎತ್ತಿ ತೋರಿಸಲಾಗಿದೆ. ಕಾವೇಶು ನಾಟಕಂ ರಮ್ಯಂ ಎನ್ನುವಂತೆ ರಂಗಭೂಮಿ ಸಮಾಜದ ಪ್ರತಿಬಿಂಬವಾಗಿ ಕೆಲಸ ಮಾಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಖ್ಯಾತ ವೈದ್ಯ ಡಾ. ಬಿ. ಅಂಬಣ್ಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮರಿಯಮ್ಮನಹಳ್ಳಿಯಲ್ಲಿ ಲಲಿತ ಕಲೆಗಳ ಕಲಾವಿದರು ಒಂದು ವೇದಿಕೆಯಡಿ ಒಂದಾಗಿ ಲಲಿತಕಲಾ ರಂಗವನ್ನು ಸ್ಥಾಪಿಸಿಕೊಂಡು ಕಳೆದ 38 ವರ್ಷಗಳಿಂದ ನಿರಂತರವಾಗಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವುದು ಹೆಮ್ಮೆಯ ಸಂಗತಿ. ನಾವುಗಳು ಕಟ್ಟಿದ ಲಲಿತಕಲಾ ರಂಗವನ್ನು ನಮ್ಮ ಕಲಾವಿದರು ಪೋಷಿಸಿಕೊಂಡು ಬರುತ್ತಿರುವುದು ಉತ್ತಮ ಬೆಳವಣಿಯಾಗಿದೆ. ಲಲಿತಕಲಾ ರಂಗವು ನೂರಾರು ವರ್ಷಗಳ ವಾರ್ಷಿಕೋತ್ಸವವನ್ನು ಆಚರಿಸಲಿ ಎಂದರು.

ಮರಿಯಮ್ಮನಳ್ಳಿಯ ಉದ್ದಮಿ ಎಂ. ಕೀರ್ತಿರಾಜ್ ಜೈನ್, ಹೊಸಪೇಟೆಯ ನಿವೃತ್ತ ಶಿಕ್ಷಕ ಕೆ. ಕರಿಬಸಪ್ಪ ಅತಿಥಿಗಳಾಗಿ ಭಾಗವಹಿಸಿದ್ದರು.

ಲಲಿತಕಲಾ ರಂಗದ ಸಂಸ್ಥಾಪಕರು ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ರಂಗತಜ್ಞ ಮ.ಬ. ಸೋಮಣ್ಣ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದರು. 2022–23 ನೇ ಸಾಲಿನ ಪದ್ಮರಾಜ್ ಜೈನ್, ನೇಮಿರಾಜ್ ಜೈನ್ ಸ್ಮರಣಾರ್ಥ ನಗದು ಪುರಸ್ಕಾರದೊಂದಿಗೆ ಕಲಾನಿಧಿ ಪ್ರಶಸ್ತಿಯನ್ನು ಗೊಲ್ಲರಹಳ್ಳಿಯ ಬಯಲಾಟದ ಕಲಾವಿದ ಎ. ನಾರಾಯಣಪ್ಪ ಅವರಿಗೆ ನೀಡಿ ಗೌರವಿಸಲಾಯಿತು.

ರಾತ್ರಿ 9 ಗಂಟೆಗೆ ಮ.ಬ. ಸೋಮಣ್ಣ ಅವರು ರಚಿಸಿರುವ ಬರ್ಗಲ್ಲು ನಾಟಕವನ್ನು ಮ.ಬ. ಸೋಮಣ್ಣ ನಿರ್ದೇಶನ ಹಾಗೂ ಹ್ಯಾಟಿ ಮಂಜುನಾಥ ಸಹ ನಿರ್ದೇಶನದಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡಿತು.

ನಾಟಕದಲ್ಲಿ ಜಿ.ಎಂ. ಕೊಟ್ರೇಶ್, ಜಿ. ಮಲ್ಲಪ್ಪ, ಎಚ್. ಮಂಜುನಾಥ, ಗುಂಡ್ರು ಸೋಮಶೇಖರ್, ಕೆ. ನಾಗೇಶ್, ಹ್ಯಾಟಿ ಮಂಜುನಾಥ, ಮಡಿವಾಳರ ಮಂಜುನಾಥ, ಜಿ. ಸೋಮಣ್ಣ, ಜಿ. ಕೆ. ಮೌನೇಶ್, ಕಟ್ಟೆ ಉಮೇಶ್, ಹುರುಕೊಳ್ಳಿ ಗುರುಪ್ರಕಾಶ್, ವೆಂಕಟಾಪುರ ಮಂಜುನಾಥ, ಜೆ. ದುರ್ಗದಾಸ್, ಬಿ. ಶಾರದಮ್ಮ, ಜಿ. ನಂದಿನಿ, ಗುಂಡ್ರು ನಾಗವೇಣಿ, ಗುಂಡ್ರು ಲೀಲಾವತಿ, ಬಿ. ಭುವನೇಶ್ವರಿ ಪಾತ್ರನಿರ್ವಹಿಸಿದರು.

ನಾಟಕಕ್ಕೆ ಸಂಗೀತವನ್ನು ಬಿ. ವಿಜಯಕುಮಾರ್, ಕೆ. ತಿಪ್ಪಣ್ಣ, ಜೆ. ದುರ್ಗದಾಸ್, ಜಿ. ಕೆ. ಮೌನೇಶ್, ಜಿ. ಮಲ್ಲಪ್ಪ, ಗುಂಡ್ರು ನಾಗವೇಣಿ ಸಂಗೀತ ನೀಡಿದರು. ಎಚ್. ರಸೂಲ್ ಸಾಹೇಬ್ ಬೆಳಕು, ಕೆ. ಮಲ್ಲನಗೌಡ ಧ್ವನಿ, ಕಟ್ಟೆ ಉಮೇಶ್, ಮಾಳ್ಗಿ ಮಂಜುನಾಥ ರಂಗಸಜ್ಜಿಕೆ, ಬಿ.ಎಂ. ಎಸ್. ಮೃತ್ಯುಂಜಯ ರಂಗಪರಿಕರ, ಸಿ.ಕೆ. ನಾಗರಾಜ ಪ್ರಚಾರ ಕಾರ್ಯನಿರ್ವಹಿಸಿದರು. ವಿ. ಶೋಭಾ ಪ್ರಾರ್ಥಿಸಿದರು. ಕೆ. ಮಲ್ಲನಗೌಡ ಸ್ವಾಗತಿಸಿದರು. ಅಕ್ಷೋಹಿಣಿ ಸಂಘದ ವಾರ್ಷಿಕ ವರದಿಯನ್ನು ಮಂಡಿಸಿದರು. ಬಿ. ಎಂ.ಎಸ್. ಮೃತ್ಯುಂಜಯ ನಿರೂಪಿಸಿದರು.

# ಸಾಮೂಹಿಕ ವಿವಾಹ: ನವಜೋಡಿಗೆ ಸಹಸ್ರಾರು ಜನರಿಂದ ಆಶೀರ್ವಾದ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಆಯೋಜಿಸುವುದು ಒಂದು ಸಮಾಜ ಸೇವೆಯಾಗಿದೆ ಎಂದು ಹೊಸಪೇಟೆಯ ನಗರಸಭಾ ಮಾಜಿ ಅಧ್ಯಕ್ಷ ಕೊಟ್ರೇಶಪ್ಪ ಹೇಳಿದರು.

ತಾಲೂಕಿನ ಹಂಪಾಪಟ್ಟಣದಲ್ಲಿ ಪಾಕ್ಷಿಕ ನೆರಳು 27ನೇ ವಾರ್ಷಿಕೋತ್ಸವದ ಅಂಗವಾಗಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಉಚಿತ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಮಾತನಾಡಿದರು. ಸಾಮೂಹಿಕ ವಿವಾಹದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ 13 ಜೋಡಿಗಳಿಗೆ ಸಹಸ್ರಾರು ಜನರ ಆಶೀರ್ವಾದ ಇರುತ್ತದೆ ಎಂದರು.

ಸಮಾಜ ಸೇವಕ ಕುರಿ ಶಿವಮೂರ್ತಿ ಮಾತನಾಡಿ, ಸಮಾಜದ ಅಂಕುಡೊಂಕುಗಳನ್ನು ತಿದ್ದುವಂತ ಪತ್ರಿಕೆಗಳು ಸಮಾಜದ ಕಾಳಜಿಯ ಕೆಲಸದಲ್ಲೂ ತೊಡಗಿಕೊಳ್ಳುತ್ತಿರುವುದು ಶ್ಲಾಘನೀಯ ಎಂದರು.

ನೆರಳು ಸಂಪಾದಕ ಬುಡ್ಡಿ ಬಸವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ನಂದಿಪುರದ ಡಾ.ಮಹೇಶ್ವರ ಸ್ವಾಮೀಜಿ ನೂತನ ದಂಪತಿಗಳಿಗೆ ಆಶೀವಾಚನ ನೀಡಿದರು. ಉತ್ತಂಗಿ ಮಠದ ಸೋಮಶೇಖರ ಸ್ವಾಮೀಜಿ, ಬೆಣ್ಣಿಹಳ್ಳಿ ಪಂಚಾಕ್ಷರಿ ಸ್ವಾಮೀಜಿ, ಮಂಜುನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಈ ವೇಳೆ ತಾ.ಪಂ.ಮಾಜಿ ಸದಸ್ಯರಾದ ಅನಿಲ್‌ಜಾಣ, ಗುರುಬಸವರಾಜ್, ಮುಖಂಡರಾದ ಹೆಗ್ಡಾಳ್ ರಾಮಣ್ಣ, ಕನ್ನಿಹಳ್ಳಿ ಚಂದ್ರಶೇಖರ್, ರಾಜ್ಯ ಕೆಪಿಸಿಸಿ ವಾಕ್ತರರಾದ ಪತ್ರೇಶ್ ಹಿರೇಮಠ್, ಪತ್ರಕರ್ತ ಸಿ.ಮಂಜುನಾಥ, ಸೊನ್ನದ ಟಿ.ಮಹೇಶ್, ಕಾನಿಪ ತಾಲೂಕು ಅಧ್ಯಕ್ಷ ಉಮಾಪತಿ ಶೆಟ್ಟರ್, ಗ್ರಾ.ಪಂ.ಅಧ್ಯಕ್ಷ ಬಿ.ನಾಗರಾಜ್ ಹಾಗೂ ಸದಸ್ಯರು ಸೇರಿದಂತೆ ಗ್ರಾಮದ ಹಿರಿಯರು ಹಾಗೂ ಜನಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು. ನಾಟಕ ನಿರ್ದೇಶಕ ಟಿ.ಕೆ. ನಾಯ್ಕ್ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಮುಂಚುಣಿಯಲ್ಲಿರುವ ಉಪ್ಪಾರ ಕಾಳಪ್ಪ ಇವರನ್ನು ಸನ್ಮಾನಿಸಲಾಯಿತು.

# ವಕೀಲರ ಸಂಘದ ತಾಲ್ಲೂಕು ಅಧ್ಯಕ್ಷರಾಗಿ ರಾಮನಗೌಡ ಪಾಟೀಲ್ ಅಯ್ಕೆ

**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲ್ಲೂಕು ವಕೀಲರ ಸಂಘದ ಪದಾಧಿಕಾರಿಗಳ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ತಾಲ್ಲೂಕು



ಅಧ್ಯಕ್ಷರಾಗಿ ರಾಮನ ಗೌಡ ಪಾಟೀಲ್ ಅಯ್ಕೆಯಾಗಿದ್ದಾರೆ. ವಕೀಲರ ಸಂಘದ ಸಭಾಂಗಣದಲ್ಲಿ ನಡೆದಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನ ಬಯಸಿ ರಾಮನಗೌಡ ಪಾಟೀಲ್ ಮತ್ತು ವಿ.ಜಿ.ಪ್ರಕಾಶ್ ಗೌಡ ನಾಮಪತ್ರ ಸಲ್ಲಿಸಿದ್ದರು.

ರಾಮನಗೌಡ ಅವರು 102 ಮತ ಪಡೆದು ಜಯ ಸಾಧಿಸಿದರು, ವಿ.ಜಿ. ಪ್ರಕಾಶ್ ಗೌಡ 93 ಮತಗಳಿಸಿ ಪರಾಭವಗೊಂಡರು.

ಉಪಾಧ್ಯಕ್ಷರಾಗಿ ಸಿ.ಪೀರ್ ಅಹಮ್ಮದ್, ಕಾರ್ಯದರ್ಶಿಯಾಗಿ ಪಾಟೀಲ್ . ಜಿ.ಎಸ್. ಎಂ.ಕೊಟ್ರಯ್ಯ, ಜಂಟಿ ಕಾರ್ಯದರ್ಶಿ ಎಚ್. ಎಂ.ಕೇಶವಮೂರ್ತಿ, ಖಜಾಂಚಿ ವಿ.ಹೂಲೆಪ್ಪ, ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಬಿ.ತಿಪ್ಪೇಶ್, ಸಿ.ಹಾಲೇಶ್, ಕೆ.ಕಂಡ್ಯಪ್ಪ, ಎಸ್.ಪ್ರಭಾಕರ ಅವರು ಆಯ್ಕೆಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿಗಳಾಗಿದ್ದ ಬಿ.ಮೆಹಬೂಬ್ ಸಾಬ್, ಡಿ.ಬಿ. ವಾಸುದೇವ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತುಂಗಭದ್ರಾ ನೀರಿನ ಮಟ್ಟ



| ಸೋಮವಾರ : 18-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1590.28 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 1844 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 11.269ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.35 ಅಡಿ |
| ಒಳ ಹರಿವು | 2943 ಕ್ಯುಸೆಕ್ |
| ಹೊರ ಹರಿವು | 7154 ಕ್ಯುಸೆಕ್ |
| ಸಾಮರ್ಥ್ಯ | 84.445 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.902/2022**

Between: 1) Sidligappa son of Pujari Hanumappa aged about 50 years, Hindu agriculturist resident of 7th ward Ujjini Village in Kottru Taluk, Vijayanagara District., 2) Smt.T.Shoobha wife of T.H.Sidlingappa aged about 40 years Hindu agriculturist resident of 6th ward Ujjini Village in Kottru Taluk, Vijayanagara District. ....Petitioner

And

The Tahasildar Kudligi ....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner No'1s mother and petitioner No.2's mother-in-law by Name Late Kenchamma wife of hanumappa @ Poojari Hanumappa was died on 06/10/1982 at Ujjini Village in Kottru Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 26/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 21/11//2023

By Order of the court
Chief Ministerial officer
Civil Judge and J.M.F.C Kudligi

Parmeshwara.H
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.920/2023**

Between: 1) Smt.Siddamma wife of late Bhairappa aged about 75 years, 2) U.S Shashikumar son of late U. Shivanna aged about 38 years All are Hindu agriculturist resident of Bishanahalli Village in Kudligi Taluk, Vijayanagara District. .....Petitioner

And

The Tahasildar Kudligi .......Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner grandfather by Name Late Dodda Bhirappa son of Late Siddappa was died on 04/061998 at Bishanahalli Village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 30/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 09/11//2023

By Order of the court
Chief Ministerial officer
Civil Judge and J.M.F.C Kudligi

Parmeshwara.H
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.909/2023**

1) Malikarjunappa.B son of late Ajjaiah @ Ajjappa aged about 42 years, Hindu agriculturist resident of Harakabavi Village in Kudligi Taluk, Vijayanagara District ... Petitioner

And

The Tahasildar Kudligi ......Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Mother by Name Shanthamma wife of late Ajjaiah @ Ajjappa was died on 02/04/2012 at Harakabavi Village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 26/12/2023 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 09/11//2023

By Order of the court
Chief Ministerial officer
Civil Judge and J.M.F.C Kudligi

Parmeshwara.H
Advocate, Kudligi

# ಕಲಾ ಪ್ರದರ್ಶನಕ್ಕೆ ಬಹುಮಾನ

## ರಾಜ್ಯ ಮಟ್ಟದ ವಾರ್ಷಿಕ ಕಲಾ ಪ್ರದರ್ಶನ । ವೀರೇಶಗೆ ಪ್ರಶಸ್ತಿ ಪ್ರದಾನ

**ಹಂಪಿ ಟೈಮ್ಸ್ ಹೊಸಪೇಟೆ**

ಶ್ರೀ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ ಶಿರಸಂಗಿ ಮತ್ತು ಶ್ರೀ ವಿಶ್ವಕರ್ಮ ಪ್ರತಿಷ್ಠಾನ, ಶಿರಸಂಗಿ ಇವರ ರಾಜ್ಯ ಮಟ್ಟದ ವಾರ್ಷಿಕ ಕಲಾ ಪ್ರದರ್ಶನವು ಡಿಸೆಂಬರ್ 10, 11, 12, 2023ರಂದು ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಿತು.

ಕಲಾಪ್ರದರ್ಶನದಲ್ಲಿ ರಾಜ್ಯದ ಅನೇಕ ವಿವಿಧ ಜಿಲ್ಲೆಗಳಿಂದ ಕಲಾಕೃತಿಗಳು ಆಗಮಿಸಿದ್ದವು. ಕಲಾ ಕೃತಿಗಳಲ್ಲಿ ಅತ್ಯುನ್ನತ ಕಲಾಕೃತಿಗಳ ಪ್ರದರ್ಶನ ಮತ್ತು ಬಹುಮಾನ ವಿತರಣೆ ನಡೆಯಿತು. ಆ ಬಹುಮಾನ ವಿತರಣೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದ



ಎಂ.ವಿ.ಎ. ವಿದ್ಯಾರ್ಥಿಯಾದ ಶ್ರೀ ವೀರೇಶ ಡಿ. ಬಡಿಗೇರ ಅವರಿಗೆ ಉತ್ತಮ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ವಿಭಾಗದ ಮುಖ್ಯಸ್ಥರಾದ ಡಾ. ಮೋಹನರಾವ್ ಬಿ. ಪಂಚಾಳ ಮತ್ತು ಉಪನ್ಯಾಸಕರಾದ ಡಾ.ಎಚ್.ಎನ್. ಕೃಷ್ಣೇಗೌಡ ಮತ್ತು ಡಾ.ಎನ್.ಜಿ. ಅಂಬರೀಶ್ ಮತ್ತು ಮತ್ತು ಎಲ್ಲಾ ವಿದ್ಯಾರ್ಥಿಗಳಿಂದ ಅಭಿನಂದನೆ ತಿಳಿಸಲಾಯಿತು.



# ಗರ್ಭಿಣಿ, ಬಾಣಂತಿಯರ ಮರಣ ಪ್ರಮಾಣ ತಗ್ಗಲಿ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ವೈದ್ಯಾಧಿಕಾರಿಗಳಿಗೆ ಸೂಚನೆ । ಅಭಿಯಾನ ಸಮಿತಿ ಸಭೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಗರ್ಭಿಣಿ ಮತ್ತು ಬಾಣಂತಿಯರಲ್ಲಿ ನಾನಾ ರೀತಿಯ ಅಂಶಗಳಿಗೆ ಸಂಬಂಧಿಸಿದಂತೆ ಸಂಭವಿಸುವ ಮರಣ ಪ್ರಕರಣಗಳ ಪ್ರಮಾಣ ಕಡಿಮೆಗೊಳಿಸಲು ನಿರಂತರ ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜಿಲ್ಲಾ ಆರೋಗ್ಯ ಸಮಿತಿ ಅಭಿಯಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾಮಾನ್ಯವಾಗಿ ಗರ್ಭಿಣಿ ಮತ್ತು ಬಾಣಂತಿಯರಲ್ಲಿ ಕಬ್ಬಿಣಾಂಶ ಕೊರತೆ, ಅಧಿಕ ರಕ್ತದೊತ್ತಡ, ಡಯಾಬಿಟಿಸ್, ತೂಕ ಪ್ರಮಾಣ ಸೇರಿದಂತೆ ಇತರೆ ಅಂಶಗಳು ಏರಿಳಿತಗೊಳ್ಳುತ್ತದೆ, ಇದಕ್ಕೆ ಸಕಾಲದಲ್ಲಿ ತಪಾಸಣೆ ಮಾಡಿಕೊಳ್ಳಲು ಸೂಚಿಸಬೇಕು ಮತ್ತು ಇದರ ಕುರಿತು ಜಾಗೃತಿ ಮೂಡಿಸಬೇಕು ಎಂದು ವೈದ್ಯಾಧಿಕಾರಿಗಳು, ಆಶಾಕಾರ್ಯಕರ್ತೆಯರಿಗೆ ತಿಳಿಸಿದರು.

ಗರ್ಭಿಣಿಯರು ತಪಾಸಣೆಗೆ ಆಗಮಿಸುವ ಸಮಯದಲ್ಲಿ ಇವರಿಗೆ ದೇಹದಲ್ಲಿ ಇಂತಹ ಅಂಶಗಳ ಪ್ರಮಾಣ ಕಡಿಮೆ ಅಥವಾ ಹೆಚ್ಚು ಇದೆ ಎಂಬುದನ್ನು ಖಾತ್ರಿ ಪಡಿಸಿಕೊಂಡು ವೈದ್ಯಾಧಿಕಾರಿಗಳು, ಗರ್ಭಿಣಿಯಾದ ಮೇಲೆ ಅವರಿಗೆ ನೀಡುವ ತಾಯಿಕಾರ್ಡ್‌ಗಳಲ್ಲಿ ನಮೂದಿಸಬೇಕು. ಅದೇರೀತಿಯಾಗಿ ಆಶಾಕಾರ್ಯಕರ್ತೆಯರು ಅವರ ಹೆಚ್ಚಿನ ಕಾಳಜಿ ವಹಿಸಬೇಕು. ಇದರಿಂದ ಹೆರಿಗೆಗಳು ಸುಗಮವಾಗಿ ನಡೆಯಲು ಅನುಕೂಲವಾಗುತ್ತದೆ ಎಂದರು.



ವಿವಿಧ ಭಾಗಗಳಿಂದ ಸಾರ್ವಜನಿಕರು ಚಿಕಿತ್ಸೆಗಾಗಿ ನಗರಕ್ಕೆ ಬರುತ್ತಾರೆ, ಆಸ್ಪತ್ರೆಗಳ ಮುಂಭಾಗ ಸಾಲುಗಟ್ಟಿ ನಿಲ್ಲುತ್ತಾರೆ, ಇದನ್ನು ನಾನೂ ಗಮನಿಸಿದ್ದೇನೆ; ವೈದ್ಯರು ನಿಗದಿತ ಸಮಯದಲ್ಲಿದ್ದುಕೊಂಡು ಕರ್ತವ್ಯ ನಿರ್ವಹಿಸಬೇಕು. ಈ ಕುರಿತು ನಿಗಾವಹಿಸಬೇಕು ಎಂದು ಡಿಹೆಚ್‌ಓ ಅವರಿಗೆ ಸೂಚಿಸಿದರು.

ಜಿಲ್ಲೆಯ ಸಾರ್ವಜನಿಕ ಆಸ್ಪತೆಗಳಲ್ಲಿ ಹಣಪಡೆದುಕೊಂಡು ಚಿಕಿತ್ಸೆ ಸೇವೆ ನೀಡುತ್ತಿರುವುದು ಕಂಡುಬರುತ್ತಿದೆ ಮತ್ತು ಕರ್ತವ್ಯಲೋಪ ಎಸಗುತ್ತಿದ್ದರೆ, ಅಂತಹವರು ಖಾಸಗಿ ವಲಯಕ್ಕೆ ತೆರಳಿ ಕಾರ್ಯನಿರ್ವಹಿಸಬೇಕು; ಇಲ್ಲದಿದ್ದರೆ ಅಂತವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಖಡಕ್ ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ಸುಸಜ್ಜಿತ ಆಸ್ಪತ್ರೆಗಳಿವೆ, ವೈದ್ಯರಿದ್ದಾರೆ, ಹಲವಾರು ಸೌಲಭ್ಯಗಳಿವೆ, ಅನುದಾನದ ಕೊರತೆಯಿಲ್ಲ, ಇವುಗಳನ್ನೆಲ್ಲಾ ಬಳಸಿಕೊಂಡು, ವೈದ್ಯರು ಪ್ರಾಮಾಣಿಕತೆಯಿಂದ ಸಾರ್ವಜನಿಕರಿಗೆ ಉತ್ತಮ ಚಿಕಿತ್ಸಾ ಸೌಲಭ್ಯ ಒದಗಿಸಬೇಕು ಎಂದು ಕಿವಿಮಾತು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು, ಎರಡು ತಿಂಗಳಲ್ಲಿ ಸಂಭವಿಸಿದ ಗರ್ಭಿಣಿ, ಬಾಣಂತಿಯರ ಮರಣ ಪ್ರಕರಣಗಳ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಈಗಾಗಲೇ ಉಲ್ಬಣಗೊಳ್ಳುತ್ತಿರುವ ಕೋವಿಡ್–19 ಸೋಂಕನ್ನು ತಡೆಯಲು ಮುಂಜಾಗ್ರತಾ ಕ್ರಮವಾಗಿ ಆರೋಗ್ಯ ಇಲಾಖೆಯು ಬೆಡ್, ಆಕ್ಸಿಜನ್ ವೆಂಟಿಲೇಟರ್ ಹಾಗೂ ಇತರೆ ಅಗತ್ಯ ಕ್ರಮ ಸಜ್ಜುಮಾಡಿಕೊಳ್ಳಲಾಗಿದೆ ಎಂದು ಡಿಹೆಚ್‌ಓ ಡಾ.ವೈ.ರಮೇಶ್ ಬಾಬು ಅವರು ಸಭೆಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಡಿ.27ರಿಂದ ಜ.01ರವರೆಗೆ ಹಮ್ಮಿಕೊಂಡಿರುವ ಕುಷ್ಠರೋಗ ಪ್ರಕರಣ ಪತ್ತೆಹಚ್ಚುವ ಅಭಿಯಾನ ಕಾರ್ಯಕ್ರಮದ ಭಿತ್ತಿಚಿತ್ರ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಬಸರೆಡ್ಡಿ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಅನಿಲ್ ಕುಮಾರ್, ಜಿಲ್ಲಾ ಕುಟುಂಬ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ ಸೇರಿದಂತೆ ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು, ಆಡಳಿತ ವೈದ್ಯಾಧಿಕಾರಿಗಳು, ಶುಶ್ರೂಷಕರು ಮತ್ತು ಆಶಾಕಾರ್ಯಕರ್ತೆಯರು ಉಪಸ್ಥಿತರಿದ್ದರು.

## ವಚನ ಅರಿವು

### ಆಚಾರ

ಗುರುವಾದಡೂ ಆಚಾರಭ್ರಷ್ಟನಾದಡೆ
ಅನುಸರಿಸಲಾಗದು.
ಲಿಂಗವಾದಡೂ ಆಚಾರದೋಹಳವಾದಲ್ಲಿ
ಪೂಜಿಸಲಾಗದು.
ಜಂಗಮವಾದಡೂ ಆಚಾರ
ಅನುಸರಣೆಯಾಗದಲ್ಲಿ ಕೂಡಲಾಗದು.
ಆಚಾರವೆ ವಸ್ತು, ವ್ರತವೆ ಪ್ರಾಣ, ಕ್ರಿಯೆಯೆ
ಜ್ಞಾನ, ಜ್ಞಾನವೆ ಆಚಾರ.
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವು
ತಾನೆ.

**– ಅಕ್ಕಮ್ಮ**

ಆಚಾರವೆಂಬುದು ಮಹತ್ವದ ನಡೆಯಾಗಿದೆ. ಆಚಾರ ಕೇವಲ ಸಮಾಜದ ಕೆಲವರಿಗೆ ಮಾತ್ರವಲ್ಲ, ಎಲ್ಲರೂ ನಡೆಯುವಂತಹ ಕ್ರಿಯೆ. ಉನ್ನತ ಹುದ್ದೆಯಲ್ಲಿ ಇರಲಿ, ಉನ್ನತ ಸ್ಥಾನದಲ್ಲಿಯೇ ಇರಲಿ ಅವರು ಆಚಾರ ಭ್ರಷ್ಟರಾಗದೆ ಇರಬೇಕು. ಸಮಾಜವನ್ನು ಸರಿದಾರಿಯಲ್ಲಿ ಇರುವಂತೆ ನೋಡಿಕೊಳ್ಳುವ ಚಿಂತಕರು ಗುರುಗಳಾದರೆ ಅವರ ಬದುಕು, ಅವರ ಮಾತುಗಳು ಒಂದಾಗಿರಬೇಕು. ಅವರು ಶರಣರು ಒಪ್ಪಿದ್ದ ಮಾರ್ಗದ ಅನುಸರಣೆಯಲ್ಲಿಯೇ ಬದುಕಬೇಕು. ಹೀಗೆ ಬದುಕದೇ, ನಡೆ–ನುಡಿ ಭಿನ್ನ ಇದ್ದರೆ ಅವರನ್ನು ಗುರುವೆಂದು ಒಪ್ಪಲಾಗದು ಮತ್ತು ಅವರ ಮಾತನ್ನು ಅನುಸರಿಸಲಾಗದು. ಲಿಂಗವೆಂದರೆ ಎಲ್ಲವನ್ನು ಒಳಗೊಂಡಿರುವ, ಏನೂ ಇಲ್ಲದ ಅಮೂರ್ತತೆಯ ಮೂರ್ತರೂಪ. ಲಿಂಗಪೂಜೆಯಿಂದ ನಮ್ಮ ಐಹಿಕ ಸುಖಕ್ಕೆ ಬೇಕಾದ ಸೌಲಭ್ಯಗಳು ದೊರೆಯುತ್ತವೆ. ನಮ್ಮ ಸಂಕಟಗಳು ಪರಿಹಾರವಾಗುತ್ತವೆ ಎಂದು ಆಸೆ ಪಟ್ಟು ಪೂಜಿಸಿದರೆ ಅದು ಲಿಂಗವಾಗಲಾರದು. ತನ್ನ ಅರಿವು ತನಗೆ ಲಭಿಸುವುದಿಲ್ಲ. ಶರಣರ ದೃಷ್ಟಿಯಲ್ಲಿ ಲಿಂಗಕ್ಕೂ ಒಂದು ಪರಿಕಲ್ಪನೆಯಿದೆ. ಲಿಂಗ ಆತ್ಮೋನ್ನತಿಗೆ ಸಾಧನ ಮಾರ್ಗವಾಗಿರಬೇಕೆಂಬುದಾಗಿದೆ. ಇದಕ್ಕೆ ಹೊರತಾದರೆ, ಕಾಯಕಕ್ಕೆ, ಬದುಕಿಗೆ ಅಡ್ಡಿಪಡಿಸುವಂತಿಲ್ಲ. ಇನ್ನು ಜಂಗಮತತ್ವ ಬಹಳ ಮುಖ್ಯವಾದುದು. ಜಂಗಮತತ್ವವೆಂದರೆ ಸಮಾಜದ ಓರೆಕೋರೆಗಳನ್ನು ತಿದ್ದಿ ಸರಿದಾರಿಯಲ್ಲಿ ನಡೆಸುವ ಜವಾಬ್ದಾರಿಯಾಗಿದೆ. ಶರಣರ ವ್ರತವನ್ನು, ಅನುಸರಿಸದೆ ಬರಿ ಒಣ ಉಪದೇಶ, ಸ್ವಾರ್ಥ ಸಾಧನೆ, ಹಣ, ದಕ್ಷಿಣೆ, ಹೊಟ್ಟೆ, ಬಟ್ಟೆಯ ಲಾಭಕ್ಕೆ ಸುಳ್ಳು ಹೇಳುತ್ತ ತಿರುಗುವ ಆಚಾರಹೀನರರನ್ನು ಒಪ್ಪಿಕೊಳ್ಳದೆ, ಅಂತಹವರ ಸಂಘದಿಂದ ದೂರ ಸರಿಯಬೇಕಾಗುತ್ತದೆ. ಶರಣರ ತತ್ವಗಳಿಗೆ ಬದ್ಧರಾಗಿ, ಜೀವನದ ಉದ್ದೇಶವೇ ಆಚಾರವಾಗಿ, ಹಿಡಿದ ಶರಣವ್ರತವನ್ನು ಪ್ರಾಣವಾಗಿಸಿಕೊಂಡು ಅದರ ಅನುಸರಣೆಯಿಂದ ಬಂದ ತಿಳುವಳಿಕೆಯನ್ನು ಒಪ್ಪಿ ಬದುಕುವುದೇ ಆಚಾರ. ಇಂತಹ ಅರಿವಿನಿಂದ, ಬದ್ಧತೆಯಿಂದ ಮನುಷ್ಯ ಬದುಕಿದರೆ ತಾನೇ ದೇವನಾಗುತ್ತಾನೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

# ಮುಂದಿನ ಪೀಳಿಗೆಗಾಗಿ ಪರಿಸರ ರಕ್ಷಣೆಯಾಗಲಿ

## ಸಿರಿ ವಾಟರ್ ಸಂಸ್ಥೆಯ ರವೀಂದ್ರ ಅಧಿಕಾರ್ ಹೇಳಿಕೆ । ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮ



■ **ಹಂಪಿ ಟೈಮ್ಸ್ ಹರಪನಹಳ್ಳಿ**

ನಾವು ಗಿಡ ಮರ ಬೆಳೆಸುವುದು ಅವುಗಳ ರಕ್ಷಣೆ ಮಾಡುವುದು ಮುಂದಿನ ಪೀಳಿಗೆಗೆ ಅತ್ಯಂತ ಅವಸ್ಯವಾಗಿದೆ.ಅದು ನಮ್ಮೆಲ್ಲರ ಹೊಣೆಯೂ ಹೌದು ಎಂದು ಸಿರಿ ವಾಟರ್ ಸಂಸ್ಥೆಯ ರವೀಂದ್ರ ಅಧಿಕಾರ್ ತಿಳಿಸಿದರು.

ಇಂದು ಸಿರಿ ವಾಟರ್ ಸಂಸ್ಥೆ, ಜೆಸಿಐ ಮತ್ತು ಜೀವಜಲ ಟ್ರಸ್ಟ್ ನ ಪದಾಧಿಕಾರಿಗಳು ಆಚಾರ್ಯ ಬಡಾವಣೆ ಪಾರ್ಕ್ ನಲ್ಲಿ ಹಮ್ಮಿಕೊಂಡಿದ್ದ ಪಾರ್ಕ್ ನಲ್ಲಿಯ ಸ್ವಚ್ಛತೆ, ಗಿಡಗಳ ಪಾತಿ ಮಾಡುವುದು, ಗೊಬ್ಬರ ಹಾಕುವ, ನೀರು ಹಾಯಿಸುವ ಸಾಮೂಹಿಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜೀವಜಲ ಟ್ರಸ್ಟ್ ಅಧ್ಯಕ್ಷ ಹೇಮಣ್ಣ ಮೋರಿಗೇರಿ ಮಾತನಾಡಿ ಈ ಹಿಂದೆ ಅಯ್ಯನಕೆರೆ ಸ್ವಚ್ಛತೆ, ನಾಯ್ಕನಕೆರೆ ಸ್ವಚ್ಛತೆಯಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿ ದ್ದನ್ನು ಶ್ಲಾಘಿಸಿದರು. ಮದುವೆ ಕಾರ್ಯಕ್ರಮಗಳು ಇಂದು ಅತೀ ಹೆಚ್ಚು ಇವೆ. ಆದಾಗ್ಯೂ ಜನರು ಬಂದು ಹೋಗಿದ್ದಾರೆ. ಯಾರು ಬರಲಿ ಬಿಡಲಿ ತಮ್ಮ ಕರ್ತವ್ಯವನ್ನು ನಿಷ್ಟೆಯಿಂದ ಮಾಡುವ ಪುರಸಭೆ ಸಿಬ್ಬಂದಿಯವರ ಕಾರ್ಯ ಮೆಚ್ಚುವಂತಹುದು. ಕರೋನ ಸಂದರ್ಭ ದಲ್ಲಿಯೂ ಸ್ವಚ್ಛತಾ ಕಾರ್ಯವನ್ನು ಮೆಚ್ಚುವಂತೆ ಮಾಡಿದ್ದೀರಿ. ಸಾರ್ವಜನಿಕರಾದ ನಾವೂ ಸಹ ಅವರಿವರು ಮಾಡುತ್ತಾರೆ ಅದು ನಮ್ಮ ಕೆಲಸವೆನ್ನದೇ ಪರಿಸರ ರಕ್ಷಣೆ ನಮ್ಮ ಜವಾಬ್ದಾರಿ ಮತ್ತು ಕರ್ತವ್ಯವೆಂದು ತಿಳಿಯಬೇಕೆಂದರು.ಪರಿಸರ, ಸ್ವಚ್ಛತೆ,ಉತ್ತಮ ಆಹಾರ ಹಾಗೂ ಶುದ್ಧ ಗಾಳಿ ಆರೋಗ್ಯಕ್ಕೆ ಪೂರಕ ಎಂದರು.

ಜೆಸಿಐ ಅಧ್ಯಕ್ಷ ಪರಶುರಾಮ್ ಚಲವಾದಿ ಯವರು ಪುರಸಭೆ ಸಿಬ್ಬಂದಿ ಹಾಗೂ ಸಂಘ – ಸಂಸ್ಥೆಯವರ ಕೆಲಸ ಮೆಚ್ಚುವಂತಾವುದು. ಪಾರ್ಕ್ ಗಳಲ್ಲಿ ಪ್ಲಾಸ್ಟಿಕ್ ಬಳಕೆ ಮಾಡಬಾರದು.ಸ್ವಚ್ಛತೆ ಕಾಪಾಡಿ ಕೊಳ್ಳಬೇಕೆಂದರು.

ಜೆಸಿಐನ ಶಿವಕುಮಾರ ನಾಯ್ಕ್, ಡಾ. ಪ್ರಿಯಾಂಕ ಅಧಿಕಾರ್, ಮೂರ್ಕಲ್ ಶ್ರೀಕಾಂತ್, ಶಿಕ್ಷಕರಾದ ಶಮಂತ್ ಮನೋಹರ್, ನಿ.ಶಿಕ್ಷಕರಾದ ಎಂ. ಶಿವಾನಂದಪ್ಪ, ಶ್ರೀನಿವಾಸ, ಆರೋಗ್ಯಾಧಿಕಾರಿ ಮಂಜುನಾಥ್ , ಉಚ್ಚಂಗೆಪ್ಪ , ಸಿರಿ ವಾಟರ್ ಸಂಸ್ಥೆಯ ಸಿಬ್ಬಂದಿಗಳು ಪುರಸಭೆ ಸಿಬ್ಬಂದಿ ಯೊಂದಿಗೆ ಭಾಗಿಯಾಗಿದ್ದರು. ಪಾರ್ಕ್‌ನ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸುತ್ತಿರುವ ಪುರಸಭೆ ಸಿಬ್ಬಂದಿ ಶೃಂಗಾರತೋಟ ರಾಮಣ್ಣ ಇವರಿಗೆ ನಗದು ಬಹುಮಾನ ನೀಡುವ ಮೂಲಕ ಮತ್ತಷ್ಟು ಪ್ರೇರಣೆ ನೀಡಿ ಪ್ರೋತ್ಸಾಹಿಸಲಾಹಿತು.

## ಸಹಭಾಗೀದರ ಇಲಾಖೆಯ ಸಮಾಲೋಚನಾ ಸಭೆ ಡಿ.21ರಂದು

**ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯ ಮಕ್ಕಳ ಆಯೋಗದ ಸದಸ್ಯರಾದ ಶಶಿಧರ್ ಕೋಸಂಬೆ ಅವರು ಡಿ.20 ಮತ್ತು 21ರಂದು ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಡಿ.20ರಂದು ಜಿಲ್ಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಹಾಗೂ ಸರ್ಕಾರಿ ಶಾಲೆಗಳು, ಮಕ್ಕಳ ಪಾಲನಾ ಸಂಸ್ಥೆ, ದತ್ತು ಕೇಂದ್ರ, ಇತರೆ ವಸತಿ ನಿಲಯ ಹಾಗೂ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡುವರು.

ಡಿ.21ರಂದು ಬೆಳಿಗ್ಗೆ 10.30ಕ್ಕೆ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಕ್ಕಳ ರಕ್ಷಣೆ ವ್ಯವಸ್ಥೆ ಕುರಿತು ಭಾಗೀದಾರರೊಂದಿಗೆ ಸಮಾಲೋಚನಾ ಸಭೆ ನಡೆಸಲಿದ್ದಾರೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಮಕೃಷ್ಣ ಅವರು ತಿಳಿಸಿದ್ದಾರೆ.

## ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆ ಡಿ.21ರಂದು

■ **ಹಂಪಿ ಟೈಮ್ಸ್ ಬಳ್ಳಾರಿ**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರ ಅಧ್ಯಕ್ಷತೆಯಲ್ಲಿ ಡಿ.21ರಂದು ಬೆಳಿಗ್ಗೆ 11ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ

## ಡಾ.ಸಿದ್ಧಯ್ಯ ಪುರಾಣಿಕ ಹೆಸರಿನಲ್ಲಿ ಟ್ರಸ್ಟ್ ಸ್ಥಾಪನೆಗಾಗಿ ಪ್ರಸ್ತಾವನೆ ಸಲ್ಲಿಕೆ: ಡಿ.21ರಂದು ಸಭೆ

■ ಹಂಪಿ ಟೈಮ್ಸ್ ಕೊಪ್ಪಳ

ಡಾ.ಸಿದ್ದಯ್ಯ ಪುರಾಣಿಕ ಅವರ ಅನುಪಮ ಸೇವೆಯನ್ನು ಸ್ಮರಿಸಿ ಅವರ ಹೆಸರಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಟ್ರಸ್ಟನ್ನು ಸ್ಥಾಪಿಸಲು ಸರ್ಕಾರದಿಂದ ಅನುಮೋದನೆ ಪಡೆಯಬೇಕಾಗಿರುವುದರಿಂದ ಬೈಲಾ ಸೇರಿದಂತೆ, ಟ್ರಸ್ಟ್‌ನ ಸ್ಥಾಪನೆಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನೊಳಗೊಂಡ ಪ್ರಸ್ತಾವನೆಯನ್ನು ಸಲ್ಲಿಸುವ ಕುರಿತಂತೆ ಡಿಸೆಂಬರ್ 21ರ ಸಂಜೆ 4 ಗಂಟೆಗೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಿಗದಿಪಡಿಸಲಾಗಿದೆ.

ಈ ಸಭೆಯಲ್ಲಿ ಜಿಲ್ಲೆಯ ಸಾಹಿತಿಗಳು–ಕಲಾವಿದರು, ಸಾಹಿತ್ಯಿಕ–ಸಾಂಸ್ಕೃತಿಕ ಸಂಘಟಕರು ಹಾಗೂ ಸಂಘ–ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮಾರಬನಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಟ್ರಸ್ಟ್ ರಚನೆಯ ಸಂಬಂಧ 2023–24ನೇ ಸಾಲಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕ್ರಿಯಾಯೋಜನೆಯಲ್ಲಿ 10 ಲಕ್ಷಗಳ ರೂ.ಅನುದಾನವನ್ನು ಡಾ.ಸಿದ್ದಯ್ಯ ಪುರಾಣಿಕ ಟ್ರಸ್ಟ್ ರಚನೆಗಾಗಿ ಕಾಯ್ದಿರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ಆರೋಗ್ಯ ಕಾರ್ಡ್‌ಗಳ ಸದುಪಯೋಗ ಪಡೆಯಿರಿ

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ.ರಮೇಶ್ ಬಾಬು ಹೇಳಿಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಕಡು ಬಡವರು ಸಹಿತ ಉನ್ನತ ಮಟ್ಟದ ಆಸ್ಪತ್ರೆಗಳಲ್ಲಿ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಪಡೆಯಲು ಸರ್ಕಾರ ರೂಪಿಸಿರುವ "ಆಯುಷ್ಮಾನ್ ಭಾರತ್ – ಪ್ರಧಾನಮಂತ್ರಿ ಜನ ಆರೋಗ್ಯ ಯೋಜನಾ – ಮುಖ್ಯಮಂತ್ರಿ ಆರೋಗ್ಯ ಕರ್ನಾಟಕ" ಕಾರ್ಡ್‌ಗಳನ್ನು ಪಡೆದು, ಆರೋಗ್ಯ ಸಮಸ್ಯೆಗಳ ಚಿಕಿತ್ಸಾ ಸಂದರ್ಭದಲ್ಲಿ ಬಿಪಿಎಲ್ ಕುಟುಂಬಗಳಿಗೆ ವಾರ್ಷಿಕ ರೂ.5 ಲಕ್ಷ ಹಾಗೂ ಎಪಿಎಲ್ ಕುಟುಂಬಗಳಿಗೆ 1.5 ಲಕ್ಷದವರೆಗೆ ಉಚಿತ ಚಿಕಿತ್ಸಾ ವೆಚ್ಚದ ಸೌಲಭ್ಯ ಪಡೆದುಕೊಳ್ಳಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ. ರಮೇಶ್ ಬಾಬು ಅವರು ತಿಳಿಸಿದ್ದಾರೆ.

ಆಯುಷ್ಮಾನ್ ಭವಃದಡಿ ಆರೋಗ್ಯ ಮೇಳಗಳಲ್ಲಿ ಆಯುಷ್ಮಾನ್ ಕಾರ್ಡ್‌ಗಳಿಗೆ ನೋಂದಾಯಿಸಿಕೊಳ್ಳುವ ಮೂಲಕ ಇದರ ಸದುಪಯೋಗಪಡೆದುಕೊಳ್ಳಬಹುದು. ಮೇಳಗಳಲ್ಲಿ ಅಂಗಾಂಗ ದಾನ ನೋಂದಣಿ ಕುರಿತು ಜಾಗೃತಿ ಸಹ ನೀಡಲಾಗುತ್ತಿದ್ದು, ಪ್ರತಿಯೊಬ್ಬರೂ ನೋಂದಾಯಿಸಿಕೊಳ್ಳಬಹುದಾಗಿದೆ. ಜಿಲ್ಲೆಯಲ್ಲಿ ಈಗಾಗಲೇ 1885 ಜನರು ಅಂಗಾಂಗ ದಾನ ನೋಂದಣಿ ಮಾಡಿಕೊಂಡಿದ್ದು, ಬಳ್ಳಾರಿ ಜಿಲ್ಲೆಯು ರಾಜ್ಯಮಟ್ಟದಲ್ಲಿ ಮೊದಲ ಸ್ಥಾನದಲ್ಲಿ ಇದೆ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವಿಕೆಗಾಗಿ ಆರೋಗ್ಯ ಮೇಳಗಳಲ್ಲಿ ಪ್ರತಿಯೊಬ್ಬರಿಗೂ ಭ್ರೂಣಲಿಂಗ ಪತ್ತೆ ನಿಷೇಧ ಕಾಯ್ದೆ 1994ರ ಕುರಿತು ಜಾಗೃತಿ ನೀಡಲಾಗುತ್ತಿದೆ. ಭ್ರೂಣಲಿಂಗ ಪತ್ತೆಗೆ ಸಂಬಂಧಿಸಿದ ಯಾವುದೇ ಜಾಹೀರಾತುಗಳಿಗೆ 3ವರ್ಷ ಜೈಲು ಶಿಕ್ಷೆ ರೂ.10 ಸಾವಿರ ದಂಡ, ವೈದ್ಯರು ಭ್ರೂಣಲಿಂಗ ಪತ್ತೆ ಮಾಡಿದಲ್ಲಿ ಮೊದಲ ಅಪರಾಧಕ್ಕೆ 3ವರ್ಷ ಜೈಲು ಶಿಕ್ಷೆ ಮತ್ತು ರೂ.10 ಸಾವಿರ ದಂಡ, 2ನೇ ಬಾರಿ ಅಪರಾಧಕ್ಕೆ 5ವರ್ಷ ಜೈಲು ಶಿಕ್ಷೆ ರೂ.50 ಸಾವಿರ ದಂಡ ವಿಧಿಸುವ ಅವಕಾಶವಿದೆ. ಅಲ್ಲದೇ ಗರ್ಭಿಣಿ ಮಹಿಳೆಗೆ ಕುಟುಂಬದ ಸದಸ್ಯರು ಭ್ರೂಣಲಿಂಗ ಪತ್ತೆಗೆ ಒತ್ತಾಯಿಸಿದರೆ. ಮೊದಲ ಅಪರಾಧಕ್ಕೆ 3ವರ್ಷ ಜೈಲು ಶಿಕ್ಷೆ ಹಾಗೂ 50 ಸಾವಿರ ರೂ.ದಂಡ, ಪುನಃ 2ನೇ ಬಾರಿ ಭ್ರೂಣಲಿಂಗ ಪತ್ತೆ ಮಾಡಿಸಿದಲ್ಲಿ 5ವರ್ಷ ಜೈಲು ಶಿಕ್ಷೆ ಮತ್ತು ರೂ.1 ಲಕ್ಷ ದಂಡ ವಿಧಿಸಲಾಗುವುದು ಎಂದೂ ಡಿಹೆಚ್‌ಓ ಡಾ.ವೈ ರಮೇಶ್ ಬಾಬು ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಆಯುಷ್ಮಾನ್ ಭವಃ ಅಭಿಯಾನದಡಿಯಲ್ಲಿ ಇಲ್ಲಿಯವರೆಗೆ ಒಟ್ಟು 1918 ಆರೋಗ್ಯ ಮೇಳಗಳನ್ನು ಆಯೋಜಿಸಲಾಗಿದೆ. ಇಲ್ಲಿಯವರೆಗೆ 100118 ಜನರು ತಪಾಸಣೆಗೆ ಒಳಪಟ್ಟಿದ್ದು, ಇವರಲ್ಲಿ 9949 ಗರ್ಭಿಣಿಯರು ಸೇರಿದ್ದಾರೆ. ಶಿಬಿರದಲ್ಲಿ 73674 ಜನಕ್ಕೆ ರಕ್ತದೊತ್ತಡ ಮತ್ತು 70791 ಜನರಿಗೆ ಮಧುಮೇಹ ಪರೀಕ್ಷೆ ಕೈಗೊಳ್ಳಲಾಗಿದೆ ಎಂದಿದ್ದಾರೆ.

ಅಲ್ಲದೇ 39970 ಜನರಿಗೆ ಬಾಯಿ ಕ್ಯಾನ್ಸರ್, 12380 ಜನರಿಗೆ ಸ್ತನ ಕ್ಯಾನ್ಸರ್, 6242 ಜನರಿಗೆ ಗರ್ಭಕಂಠದ ಕ್ಯಾನ್ಸರ್ ಪರೀಕ್ಷೆ ಮಾಡಲಾಗಿದೆ. 9599 ಜನರಿಗೆ ನೇತ್ರ ಪರೀಕ್ಷೆ ಮಾಡಲಾಗಿದ್ದು, 10839 ಜನರಿಗೆ ಕ್ಷಯರೋಗದ ಪರೀಕ್ಷೆ ಮಾಡಲಾಗಿದೆ ಹಾಗೂ 7092 ಜನರಿಗೆ ಕುಷ್ಠರೋಗ ಪರೀಕ್ಷೆ ಕೈಗೊಳ್ಳಾಗಿದೆ. 4130 ಜನರಿಗೆ ಕುಟುಂಬ ಕಲ್ಯಾಣದ ವಿಧಾನಗಳ ಸೇವೆಗಳನ್ನು ಒದಗಿಸಲಾಗಿದೆ ಎಂದು ತಿಳಿಸಿದ್ದಾರೆ.

ಶಿಬಿರಗಳಲ್ಲಿ ಇ–ಸಂಜೀವಿನಿ ಆಪ್ ಮೂಲಕ ತಜ್ಞ ವೈದ್ಯರನ್ನು ಯಾವುದೇ ಹಣದ ವೆಚ್ಚವಿಲ್ಲದೆ 11615 ಜನ ಸಂಪರ್ಕಿಸಿದ್ದಾರೆ. ಶಿಬಿರದಲ್ಲಿ 9326 ಜನರಿಗೆ ಆಯುಷ್ ಪದ್ಧತಿ ಸೇವೆ ನೀಡಲಾಗಿದೆ. ಮೇಳಗಳಲ್ಲಿ 1493 ಆಹಾರ ಪರೀಕ್ಷೆಗಳನ್ನು ಕೈಗೊಳ್ಳಲಾಗಿದೆ. ರಾಷ್ಟ್ರೀಯ ಲಸಿಕೆ ಕಾರ್ಯಕ್ರಮದಡಿ 3383 ಮಕ್ಕಳಿಗೆ ಲಸಿಕೆಯನ್ನು ಹಾಕಲಾಗಿದೆ. ಶಿಬಿರಗಳಲ್ಲಿ 4396 ಆಯುಷ್ಮಾನ ಭಾರತ್ ಕಾರ್ಡ್‌ಗಳನ್ನು ಸೃಜನೆ ಮಾಡಲಾಗಿದೆ ಮತ್ತು 21555 ಜನರಿಗೆ ಆಭಾ ಕಾರ್ಡ್ ರಚಿಸಲಾಗಿದೆ. ಅಭಿಯಾನಡಿಯಲ್ಲಿ 95 ಉಚಿತ ರಕ್ತದಾನ ಶಿಬಿರಗಳನ್ನು ಏರ್ಪಡಿಸಿ 3811 ರಕ್ತ ಯುನಿಟ್ ರಕ್ತ ಸಂಗ್ರಹಿಸಲಾಗಿದೆ ಎಂದು ವಿವರಿಸಿದ್ದಾರೆ.

ಆಯುಷ್ಮಾನ್ ಭಾರತ ಹೆಲ್ತ್ ಅಕೌಂಟ್ ಮಾಡಿಸುವ ಮೂಲಕ ದೇಶದ ಯಾವುದೇ ಭಾಗದಲ್ಲಿ ಚಿಕಿತ್ಸೆಗೆ ತೆರಳಿದರೂ ಸಹ ಸಕಾಲದಲ್ಲಿ ಚಿಕಿತ್ಸೆಯನ್ನು ನೀಡಲು ಸಹಕಾರಿಯಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ತಪ್ಪದೇ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ವಿನಂತಿಸಿದ್ದಾರೆ.

ಜಿಲ್ಲೆಯಲ್ಲಿ ಆರೋಗ್ಯ ಮೇಳಗಳ ಯಶಸ್ವಿಗಾಗಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಮತ್ತು ತಂಡ ಜಿಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಹಾಗೂ ತಾಲ್ಲೂಕು ಆರೋಗ್ಯ ಅಧಿಕಾರಿಗಳು ಸೂಕ್ತ ಮೇಲ್ವಿಚಾರಣೆ ಕೈಗೊಳ್ಳಲಾಗುತ್ತಿದ್ದಾರೆ. ಆಶಾಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ಮಾಹಿತಿ ನೀಡುತ್ತಿದ್ದು, ಆರೋಗ್ಯ ಶಿಕ್ಷಣಾಧಿಕಾರಿಗಳು ಆರೋಗ್ಯ ಜಾಗೃತಿ ಕಾರ್ಯ ಕೈಗೊಳ್ಳುತ್ತಿದ್ದಾರೆ. ಸಾರ್ವಜನಿಕರು ಆರೋಗ್ಯ ಮೇಳಗಳಲ್ಲಿ ಭಾಗವಹಿಸಿ, ಆರೋಗ್ಯಯುತ ಬಳ್ಳಾರಿ ಜಿಲ್ಲೆಯನ್ನಾಗಿಸಲು ಸಹಕರಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶ್‌ಬಾಬು ಅವರು ವಿನಂತಿಸಿದ್ದಾರೆ.

## ಮೈಕ್ರೋ ನ್ಯೂಸ್

### ಶೇ. 50 ವಿಶೇಷ ರಿಯಾಯಿತಿಯಲ್ಲಿ ಕನ್ನಡ ವಿವಿ ಪುಸ್ತಕ ಮಾರಾಟ

**ಹಂಪಿ ಟೈಮ್ಸ್ ಹೊಸಪೇಟೆ:**

ಕನ್ನಡ ವಿಶ್ವವಿದ್ಯಾಲಯ ನುಡಿಹಬ್ಬ–32, ಜನವರಿ ತಿಂಗಳಲ್ಲಿ ನಡೆಸಲು ಉದ್ದೇಶಿಸಿರುವ ಸಂಬಂಧ ಪ್ರಸಾರಾಂಗವು ಪ್ರಕಟಿಸಿರುವ ಎಲ್ಲಾ ಪ್ರಕಟಣೆಗಳನ್ನು ಶೇ 50 ವಿಶೇಷ ರಿಯಾಯಿತಿ ದರದಲ್ಲಿ ಡಿ.14 ರಿಂದ ಡಿ.31 ರವರೆಗೆ ಮಾರಾಟ ಮಾಡಲಾಗುತ್ತದೆ. ಸಾರ್ವಜನಿಕರು ಈ ವಿಶೇಷ ರಿಯಾಯಿತಿ ಸದುಪಯೋಗಪಡೆದುಕೊಳ್ಳಬೇಕೆಂದು ಪ್ರಸಾರಾಂಗದ ನಿರ್ದೇಶಕರಾದ ಡಾ. ಶೈಲಜ ಇಂ. ಹಿರೇಮಠ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ: ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಮೊಬೈಲ್ ಸಂಖ್ಯೆ: 94801 89860, ಪುಸ್ತಕ ಮಾರಾಟ ಮಳಿಗೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ, ಬೆಂಗಳೂರು ಮೊಬೈಲ್ ಸಂಖ್ಯೆ: 94499 80712 ಮತ್ತು ದೂರವಾಣಿ ಸಂಖ್ಯೆ: 080–22372388 ಕಚೇರಿ ಅವಧಿಯಲ್ಲಿ ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು ಎಂದು ತಿಳಿಸಿದ್ದಾರೆ.

### ಇಂದು ಕೊಟ್ಟೂರು ವ್ಯಾಪ್ತಿಯ ಗ್ರಾಮಗಳಿಗೆ ವಿದ್ಯುತ್ ವ್ಯತ್ಯಯ

**ಕೊಟ್ಟೂರು:** ಕೊಟ್ಟೂರು 66/ಕೆವಿ ಎಂಯುಎಸ್‌ಎಸ್ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣ ಕಾಮಗಾರಿ ಇರುವುದರಿಂದ ಕೊಟ್ಟೂರು ವಿದ್ಯುತ್ ಉಪ ಕೇಂದ್ರಕ್ಕೆ ಒಳಪಟ್ಟ ಗ್ರಾಮಗಳಿಗೆ ಡಿ.19 ಬೆಳಗ್ಗೆ 9 ಘಂಟೆಯಿಂದ ಸಂಜೆ 6 ಘಂಟೆವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ಜೆಸ್ಕಾಂ ಇಲಾಖೆ ಕಾರ್ಯ ಮತ್ತು ಪಾಲನ ವಿಭಾಗ ಕೂಡ್ಲಿಗಿ ಎಇಇ ಪ್ರಕಾಶ್ ಪತ್ತೇನೂರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿ.21 ರಂದು ಗಂಗಾವತಿಯಲ್ಲಿ ವಾಕ್ ಇನ್ ಇಂಟರ್‌ವ್ಯೂವ್

■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಡಿಸೆಂಬರ್ 21 ರಂದು ಬೆಳಿಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಗಂಗಾವತಿಯ ಸರ್ಕಾರಿ ಐ.ಟಿ.ಐ ಕಾಲೇಜ್‌ನಲ್ಲಿ ವಾಕ್ ಇನ್ ಇಂಟರ್‌ವ್ಯೂವನ್ನು ಆಯೋಜಿಸಲಾಗಿದೆ. ಈ ವಾಕ್ ಇನ್ ಇಂಟರ್‌ವ್ಯೂವ್‌ನಲ್ಲಿ ಅತಿಥಿ ಬೋಧಕರ ಹುದ್ದೆಗೆ ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಯಾವುದೇ ಶುಲ್ಕ ಇರುವುದಿಲ್ಲ ಎಲ್ಲರಿಗೂ ಉಚಿತ ಪ್ರವೇಶವಿರುತ್ತದೆ.

21 ವರ್ಷ ಮೇಲ್ಪಟ್ಟ ಐ.ಟಿ.ಐ–ಎಲೆಕ್ಟ್ರಿಷಿಯನ್ (ಅಂಪ್ರೆಂಟಿಶಿಪ್ ಹಾಗೂ ಕನಿಷ್ಟ 2 ವರ್ಷದ ಅನುಭವ) ಅಥವಾ ಡಿಪ್ಲೋಮಾ–ಎಲೆಕ್ಟ್ರಿಕಲ್ ಜೊತೆಗೆ ಕನಿಷ್ಟ 2 ವರ್ಷದ ಅನುಭವ ಅಥವಾ ಬಿ.ಇ.–ಎಲೆಕ್ಟ್ರಿಕಲ್ ಜೊತೆಗೆ ಕನಿಷ್ಟ 2 ವರ್ಷದ ಅನುಭವವುಳ್ಳ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ವಾಕ್ ಇನ್ ಇಂಟರ್‌ವ್ಯೂವ್ ನಲ್ಲಿ ಭಾಗವಹಿಸುವ ಅಭ್ಯರ್ಥಿಗಳು ದೃಢೀಕರಿಸಲಾದ ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳ 3 ಪ್ರತಿಗಳೊಂದಿಗೆ ಮತ್ತು ಆಧಾರ ಕಾರ್ಡಿನ ಪ್ರತಿ, ಬಯೋಡಾಟಾ ಹಾಗೂ ಪಾಸ್ ಪೋರ್ಟ್ ಅಳತೆಯ 2 ಭಾವಚಿತ್ರಗಳೊಂದಿಗೆ ವಾಕ್ ಇನ್ ಇಂಟರ್‌ವ್ಯೂವ್‌ನಲ್ಲಿ ಭಾಗವಹಿಸಿ ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ, ಮೊ.ನಂ: 8105693234 ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA